ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಗುರುವಾರ ನಡೆದ ಐಪಿಎಲ್ ಪಂದ್ಯದಲ್ಲಿ ಸಾಯಿ ಸುದರ್ಶನ್, ಶುಭಮನ್ ಗಿಲ್ ಹಾಗು ಜೋಸ್ ಬಟ್ಲರ್ ರವರ ಬ್ಯಾಟಿಂಗ್ ನೆರವಿನಿಂದ ಗುಜರಾತ್ ಟೈಟನ್ಸ್ 20 ಓವರ್‌ನಲ್ಲಿ 4 ವಿಕೆಟ್ ಕಳೆದುಕೊಂಡು 229 ರನ್ ಗಳಿಸಿದೆ.

22 ಮೇ, 2026 ಶುಕ್ರವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 72 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ದೃಶ್ಯಂ 3, ಕುಟುಕು ಇನ್ನಷ್ಟು ಹೊಸ ಚಿತ್ರಗಳು ಬಿಡುಗಡೆ » 2



ಆರಂಭದಿಂದಲೇ ಗುಣಾತ್ಮಕ ಶಿಕ್ಷಣದತ್ತ ಗಮನಹರಿಸಿ » 3



ಹೊರ್ಮುಜ್ ಜಲಸಂಧಿ ಮೇಲೆ ಇರಾನ್ ಬಿಗಿ ಹಿಡಿತ » 4

# ನೀಟ್ ಅಕ್ರಮ ಹೊಣೆ ಮೋದಿ ಹೊರಲಿ

## ರಾಜ್ಯಗಳಿಗೆ ಪರೀಕ್ಷೆ ಅವಕಾಶ ಕಲ್ಪಿಸಿ : ಮುಖ್ಯಮಂತ್ರಿ ಸಿದ್ದರಾಮಯ್ಯ ಒತ್ತಾಯ

• ಪ್ರಜೋದಯ ವರದಿ

**ಬೆಂಗಳೂರು:** ವೈದ್ಯಕೀಯ ಕಾಲೇಜುಗಳಿಗೆ ನಡೆಸುವ ಸಿಇಟಿ ಪರೀಕ್ಷೆ ಅಧಿಕಾರವನ್ನು ಆಯಾ ರಾಜ್ಯಗಳಿಗೇ ನೀಡಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒತ್ತಾಯಿಸಿದರು.



ಫ್ರೀಡಂ ಪಾರ್ಕ್‌ನಲ್ಲಿ ಗುರುವಾರ ನೀಟ್ ಪರೀಕ್ಷಾ ಅಕ್ರಮಗಳ ವಿರುದ್ಧ ಯುವ ಕಾಂಗ್ರೆಸ್ ಘಟಕ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ನೀಟ್ ಪರೀಕ್ಷೆಗಳನ್ನು ನಡೆಸಬಾರದು. ನೀಟ್ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದ್ದು, ಅದಕ್ಕೆ ಜವಾಬ್ದಾರರಾಗಿರುವ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅಥವಾ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಜವಾಬ್ದಾರಿ ಹೊರಲಿಲ್ಲ. ಧರ್ಮೇಂದ್ರ ಪ್ರಧಾನ್ ಅವರು ನೀಟ್ ಪರೀಕ್ಷೆಗೆ ಮತ್ತೊಂದು ದಿನಾಂಕ ನಿಗದಿ ಮಾಡಿ ಕೈ ತೊಳೆದುಕೊಂಡರು. ದೇಶದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಕಾಳಜಿ ಇದ್ದಿದ್ದರೆ ಅವರು ರಾಜೀನಾಮೆ ನೀಡುತ್ತಿದ್ದರೆಂದು ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕ ಮತ್ತಿತರೆ ರಾಜ್ಯಗಳಲ್ಲಿ ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ಬಯಸುವವರಿಗೆ ಸಿಇಟಿ ಪರೀಕ್ಷೆ ಪಾರದರ್ಶಕವಾಗಿ ನಡೆಯುತ್ತಿತ್ತು. ನರೇಂದ್ರ ಮೋದಿ ಅವರು ಪ್ರಧಾನಿಯಾದ ನಂತರ ಹಿಂದೆ ಇದ್ದ ಪದ್ಧತಿಯನ್ನು ಬದಲಾಯಿಸಿ 2016 ರಲ್ಲಿ ನೀಟ್ ಪರೀಕ್ಷೆಯನ್ನು ಜಾರಿಗೆ ತಂದರು. ಹತ್ತು ವರ್ಷಗಳಲ್ಲಿ ಐದು ಬಾರಿ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ. ಪರೀಕ್ಷೆ ಬರೆಯಲು ವಿದ್ಯಾರ್ಥಿಗಳು ವರ್ಷದಿಂದ ತಯಾರಿ ಮಾಡಿಕೊಂಡು, ಅನೇಕರು ತರಬೇತಿಗಾಗಿ ಸಾವಿರಾರು ರೂ. ವೆಚ್ಚ ಮಾಡಿರುತ್ತಾರೆಂದು ಹೇಳಿದರು.

ದೇಶದಲ್ಲಿ 2016 ರಿಂದ ಇಲ್ಲಿಯವರೆಗೆ 5 ಬಾರಿ ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ. ಬಿಜೆಪಿಯವರು ಭಂಡತನ ಪ್ರದರ್ಶಿಸಿ ರಾಜಿನಾಮೆ ಕೊಡಲು ಮನಸ್ಸು ಮಾಡುತ್ತಿಲ್ಲ. ಕೇಂದ್ರ ಶಿಕ್ಷಣ ಸಚಿವರು ಹೊಣೆಗಾರಿಕೆ ಹೊತ್ತು ರಾಜೀನಾಮೆ ನೀಡುವವರೆಗೂ ಹೋರಾಟವನ್ನು ಮುಂದುವರೆಸಬೇಕು. ಪರಿಶ್ರಮ ಹಾಕಿದ್ದ ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆ ಸೋರಿಕೆಯಿಂದ ಹತಾಶರಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅಂತಹ ಕುಟುಂಬಗಳಿಗೆ ಪರಿಹಾರ ನೀಡುವುದು ಕೇಂದ್ರ ಸರ್ಕಾರದ ಜವಾಬ್ದಾರಿ ಎಂದರು.

### ಸಿಎಂ ನೇತೃತ್ವದಲ್ಲಿ ಪ್ರತಿಭಟನೆ

ಪ್ರತಿಭಟನಾಕಾರರು ನೀಟ್ ಪರೀಕ್ಷೆಗಳನ್ನು ರದ್ದುಗೊಳಿಸುವಂತೆ ಮತ್ತು ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು. ಸಾವಿರಕ್ಕೂ ಹೆಚ್ಚು ಪೊಲೀಸರ ಬಿಗಿ ಭದ್ರತೆಯ ನಡುವೆ ಕಾಂಗ್ರೆಸ್ ಕಾರ್ಯಕರ್ತರು ಜಮಾಯಿಸಿದ್ದರು. ಯುವ ಕಾಂಗ್ರೆಸ್ ಕಾರ್ಯಕರ್ತರು ಲೋಕಭವನಕ್ಕೆ ಮುತ್ತಿಗೆ ಹಾಕಲು ನಿರ್ಧರಿಸಲಾಗಿತ್ತು. ಫ್ರೀಡಂಪಾರ್ಕ್ ಮತ್ತು ಲೋಕಭವನದ ಸುತ್ತಮುತ್ತ ಹೆಚ್ಚುವರಿ ಭದ್ರತೆಯನ್ನು ನಿಯೋಜಿಸಲಾಗಿತ್ತು.

# ಬಿಜೆಪಿ ರಾಜ್ಯಾಧ್ಯಕ್ಷ ಬದಲಾವಣೆ ಕೇವಲ ವದಂತಿ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಕಾರ್ಯವೈಖರಿಯ ಮೌಲ್ಯಮಾಪನ ನಡೆಯುತ್ತಿದೆ ಎಂಬ ಹೇಳಿಕೆಗಳೆಲ್ಲಾ ಕೇವಲ ಊಹಾಪೋಹ ಎಂದಿರುವ ರಾಜ್ಯ ಬಿಜೆಪಿ ಉಸ್ತುವಾರಿ ರಾಧಾ ಮೋಹನ್ ಅಗರವಾಲ್ ಅವರು ಪಕ್ಷದ ಅಧ್ಯಕ್ಷರ ಬದಲಾಣೆ ವಿಚಾರಗಳಿಗೆ ತೆರೆ ಎಳೆದಿದ್ದಾರೆ.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಜಯೇಂದ್ರ ಅವರು ಸಕ್ರಿಯವಾಗಿ ಕೆಲಸ ಮಾಡುತ್ತಿದ್ದಾರೆ. ಅವರು ಅಧ್ಯಕ್ಷರಾಗಿ ಮುಂದುವರೆಯುವರೇ ಇಲ್ಲವೇ ಎಂಬುದು ಇಲ್ಲಿನ ಸಭೆಯಲ್ಲಿ ನಿರ್ಧಾರ ಆಗುವುದಿಲ್ಲ. ಇಲ್ಲಿ ಅಧ್ಯಕ್ಷರ ಮೌಲ್ಯಮಾಪನ ನಡೆಯುತ್ತದೆಂಬುದು ಭ್ರಮೆ ಎಂದರು.



ನಮ್ಮಲ್ಲಿ ಮೌಲ್ಯಮಾಪನ ನಿರಂತರವಾಗಿ ನಡೆಯುತ್ತಿರುತ್ತದೆ. ಯಾವ ನಾಯಕ ಏನು ಮಾಡುತ್ತಿದ್ದಾರೆಂಬುದನ್ನು ತಿಳಿಯಲು ಇಲ್ಲಿ ಬರುವ ಅವಶ್ಯಕತೆ ಇಲ್ಲ. ನಾನು ಅಧ್ಯಕ್ಷರ ಕಾರ್ಯಕರ್ತನಲ್ಲ, ಬಿಜೆಪಿ ಕಾರ್ಯಕರ್ತ. ನಾನೇ ಎಲ್ಲವನ್ನೂ ಹೇಳಬಲ್ಲೆ ಎಂದು ತಿಳಿಸಿದರು.

ಯಾವಾಗ ಅಂತಿಮವಾಗಿ ಒಬ್ಬ ಅಧ್ಯಕ್ಷರನ್ನು ಪ್ರಕಟಿಸಲಾಗುವುದೋ ಆಗ ಹಳೆಯ ತಂಡದ ಬದಲಾಗಿ ಸಹಜವಾಗಿ ಹೊಸ ತಂಡ ರಚಿಸಲಾಗುತ್ತದೆ. ಹೊಸ ಅಧ್ಯಕ್ಷರು ಬಂದರೆ ಕೋರ್ ಕಮಿಟಿ ಬದಲಾಗುವುದಿಲ್ಲ. ಅದನ್ನು ರಾಷ್ಟ್ರ ಘಟಕವು ನಿರ್ಧರಿಸುತ್ತದೆ. ಒಂದಿಬ್ಬರು ಹಳಬರನ್ನು ಬದಲಿಸಿ ಹೊಸಬರು ಬರಬಹುದು ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಕಾಂಗ್ರೆಸ್ ವಿರುದ್ಧ ಟೀಕೆ

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ನಡುವೆ ಜಗಳ ಮಾಡಿಸುತ್ತಿದ್ದಾರೆ. ಇಬ್ಬರ ಜಗಳದಲ್ಲಿ ತಮಗೆ ಮುಖ್ಯಮಂತ್ರಿ ಅವಕಾಶ ಸಿಗಲಿ ಎಂದು ಖರ್ಗೆ ಕಾಯುತ್ತಿದ್ದಾರೆಂದು ಟೀಕಿಸಿದರು.

ಕಾಂಗ್ರೆಸ್ಸಿನ ಸ್ಥಿತಿ ಹದಗೆಟ್ಟಿದೆ. ಹಲವಾರು ಶಾಸಕರು ನಮ್ಮ ಸಂಪರ್ಕದಲ್ಲಿದ್ದಾರೆ. ವಿಧಾನಸಭೆ ಚುನಾವಣೆ ಈಗ ನಡೆದರೂ ಜನರು ಕಾಂಗ್ರೆಸ್ ಸೋಲಿಸಿ ಬಿಜೆಪಿಗೆ ಮತ ನೀಡುತ್ತಾರೆಂದು ವಿಶ್ವಾಸ ವ್ಯಕ್ತಪಡಿಸಿದರು.

## ಬೈಕ್‌ಗೆ ಪಿಕಪ್ ವಾಹನ ಡಿಕ್ಕಿ: ದಂಪತಿ ಸಾವು



• ಪ್ರಜೋದಯ ವರದಿ

**ಹೊಳೆನರಸೀಪುರ:** ಬೈಕ್‌ಗೆ ಪಿಕಪ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಬೈಕ್‌ನಲ್ಲಿದ್ದ ದಂಪತಿ ಸ್ಥಳದಲ್ಲೇ ಮೃತಪಟ್ಟ ಘಟನೆ ತಾಲ್ಲೂಕಿನ ಪೆದ್ದನಹಳ್ಳಿ ಬಳಿ ನಡೆದಿದೆ.

ತಾಲ್ಲೂಕಿನ ನಗರ್ತಿ ಗ್ರಾಮದ ನಿವಾಸಿಗಳಾದ ರಮೇಶ್ (40), ಪತ್ನಿ ಮಂಜುಳ (39) ಮೃತರು. ದಂಪತಿ ಬೈಕ್‌ನಲ್ಲಿ ಪಟ್ಟಣದತ್ತ ತೆರಳುತ್ತಿದ್ದ ವೇಳೆ ಹಿಂದೆ ವೇಗವಾಗಿ ಬಂದ ಪಿಕಪ್ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ದಂಪತಿ ರಸ್ತೆ ಮೇಲೆ ಬಿದ್ದು ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಘಟನೆ ಬಳಿಕ ಸ್ಥಳದಲ್ಲಿ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಮೃತದೇಹಗಳನ್ನು ಪೊಲೀಸರ ಪರಿಶೀಲನೆ ನಂತರ ಮರಣೋತ್ತರ ವೈದ್ಯಕೀಯ ಪರೀಕ್ಷೆಗೆ ರವಾನಿಸಲಾಯಿತು. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಅಪಘಾತ: ಸ್ಥಳದಲ್ಲೇ ಇಬ್ಬರು ಮೃತ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ರಸ್ತೆ ಬದಿ ನಿಂತಿದ್ದ ಟ್ರ್ಯಾಕ್ಟರ್‌ಗೆ ಬೈಕ್ ಡಿಕ್ಕಿಯಾಗಿ ಇಬ್ಬರು ಸ್ಥಳದಲ್ಲೇ ಮೃತಪಟ್ಟು, ಒಬ್ಬರು ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲ್ಲೂಕಿನ ಬೆಳಗುಲಿ ಸಮೀಪ ನಡೆದಿದೆ.

ಅರಸೀಕೆರೆ ತಾಲ್ಲೂಕು ಗಂಡಸಿ ಹೋಬಳಿ ಕಾಳೇನಹಳ್ಳಿ ಗ್ರಾಮದ ಪ್ರದೀಪ್ (22) ಹಾಗು ಅರುಣ್ (21) ಮೃತರು. ಮತ್ತೊಬ್ಬ ಗಾಯಾಳುವನ್ನು ಚಿಕಿತ್ಸೆಗಾಗಿ ಬೆಳ್ಳೂರು ಕ್ರಾಸ್‌ನ ಬಿಜಿಎಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.



ಶುಂಠಿ ಕೆಲಸಕ್ಕಾಗಿ ಮೂವರು ನವಿಲೆ ಗ್ರಾಮದಲ್ಲಿ ವಾಸ್ತವ್ಯ ಹೂಡಿದ್ದರು. ಬುಧವಾರ ರಾತ್ರಿ 8 ಗಂಟೆ ಸಮಯದಲ್ಲಿ ಹಿರೀಸಾವೆಯ ಸಂಬಂಧಿಕರ ಮನೆಗೆ ಹೋಗುತ್ತಿದ್ದಾಗ ಅವಘಡ ಸಂಭವಿಸಿದೆ. ಬೈಕ್ ವೇಗವಾಗಿದ್ದರಿಂದ ಮುಂದೆ ನಿಂತಿದ್ದ ಟ್ರ್ಯಾಕ್ಟರ್ ಕಾಣಿಸದೆ ಡಿಕ್ಕಿ ಮಾಡಿದ್ದಾರೆ. ಅಪಘಾತದ ರಭಸಕ್ಕೆ ತೀವ್ರ ರಕ್ತಸ್ರಾವವಾಗಿ ಇಬ್ಬರೂ ಮೃತಪಟ್ಟಿದ್ದಾರೆ. ನುಗ್ಗೇಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ರೈಲಿಗೆ ತಲೆಕೊಟ್ಟು ಯುವಕ ಆತ್ಮಹತ್ಯೆ

**ಆಲೂರು :** ರೈಲಿಗೆ ಸಿಲುಕಿ ಯುವಕನೊಬ್ಬ ಆತ್ಮಹತ್ಯೆ ಮಾಡಿಕೊಂಡ ಘಟನೆ ತಾಲ್ಲೂಕಿನ ಮರಸು ಗ್ರಾಮ ಬಳಿ ನಡೆದಿದೆ. ಬಾಳಿಗನಹಳ್ಳಿಯ ನಿವಾಸಿ ಪ್ರವೀಣ್ (26) ಆತ್ಮಹತ್ಯೆಗೆ ಶರಣಾದ ಯುವಕ.

ಯಶವಂತಪುರ-ಕಣ್ಣೂರು ರೈಲಿಗೆ ತಲೆಕೊಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದು, ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆ ರೈಲ್ವೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮೃತದೇಹವನ್ನು ಮರಣೋತ್ತರ ವೈದ್ಯಕೀಯ ಪರೀಕ್ಷೆಗೆ ರವಾನಿಸಲಾಗಿದೆ. ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ಕೈಗೊಂಡಿದ್ದಾರೆ. ಆತ್ಮಹತ್ಯೆಗೆ ನಿಖರವಾದ ಕಾರಣ ತಿಳಿದುಬಂದಿಲ್ಲ.

# ತಾಳ್ಮೆಯ ಗುಣದಿಂದಲೇ ಕೆ.ಆರ್.ಮಂಜುನಾಥ್ ಚಿರಪರಿಚಿತ

## ಕೆ.ಕೆ.ಶೆಟ್ಟಿ ಕುತ್ತಿಕಾರ್ ದತ್ತಿ ಪ್ರಶಸ್ತಿ ಪುರಸ್ಕೃತರನ್ನು ಸನ್ಮಾನಿಸಿ ಜೆ.ಆರ್.ಕೆಂಚೇಗೌಡ ಅಭಿಮತ

• ಪ್ರಜೋದಯ ವರದಿ

**ಹಾಸನ:** ಪತ್ರಿಕೋದ್ಯಮದಲ್ಲಿ ಹಲವು ವರ್ಷಗಳಿಂದ ಸೇವೆ ಸಲ್ಲಿಸಿಕೊಂಡು ಬರುತ್ತಿರುವ ಹಿರಿಯ ಪತ್ರಕರ್ತ ಕೆ.ಆರ್.ಮಂಜುನಾಥ್ ಅವರ ತಾಳ್ಮೆ, ವ್ಯವಧಾನದ ಗುಣಗಳಿಂದಲೇ ಎಲ್ಲರಿಗೂ ಚಿರಪರಿಚಿತರಾಗಿದ್ದಾರೆಂದು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ ಅವರು ಹೇಳಿದರು.



ಕಾಸರಗೋಡಿನ ಕೆ.ಕೆ.ಶೆಟ್ಟಿ ಕುತ್ತಿಕಾರ್ ದತ್ತಿ ಪ್ರಶಸ್ತಿ ಪುರಸ್ಕೃತರಾದ ಹಿರಿಯ ಪತ್ರಕರ್ತ ಕೆ.ಆರ್.ಮಂಜುನಾಥ್ ಅವರಿಗೆ ಜಿಲ್ಲಾ ಪತ್ರಕರ್ತರ ಸಂಘದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ನಾವು ಆರಂಭದಲ್ಲಿ ಪತ್ರಿಕೋದ್ಯಮ ಆರಂಭಿಸಿದಾಗ ಕೆಲವೇ ಮಂದಿ ಪತ್ರಕರ್ತರಿದ್ದವು. ಅವರಲ್ಲಿ ಕೆ.ಆರ್. ಮಂಜುನಾಥ್ ಕೂಡ ಒಬ್ಬರು. ಚಿಕ್ಕ ವಯಸ್ಸಿನಿಂದಲೂ ಅವರೊಂದಿಗೆ ಒಡನಾಟ ಇಟ್ಟುಕೊಂಡು ಬಂದಿದ್ದೇನೆ. ನಮ್ಮದೇಯಾದ ತಂಡವೊಂದನ್ನು ಕಟ್ಟಿಕೊಂಡು ದೇಶ-ವಿದೇಶ ಪ್ರವಾಸ ಮಾಡಿದ್ದೇವೆ. 45 ವರ್ಷ ಜೊತೆಯಾಗಿ ಬಂದಿದ್ದೇವೆಂದು ತಮ್ಮ ಒಡನಾಟವನ್ನು ನೆನಪಿಸಿಕೊಂಡರು.

ಮಂಜಣ್ಣ ಅವರು ತಮ್ಮ ವೃತ್ತಿಯಲ್ಲಿ ಯಾರನ್ನೂ ಕಟುವಾಗಿ ಟೀಕೆ ಮಾಡಿದವರಲ್ಲ. ಎಲ್ಲರೊಂದಿಗೂ ವಿಶ್ವಾಸ ಪೂರ್ವಕವಾಗಿಯೇ ನಡೆದುಕೊಂಡಿದ್ದಾರೆ. ಅದಕ್ಕೆ ಅವರ ಕೌಟುಂಬಿಕ ವಾತಾವರಣ ಕಾರಣವಾಗಿದೆ. ಜಿಲ್ಲೆಯ ಪತ್ರಿಕೋದ್ಯಮಕ್ಕೆ ಉತ್ತಮ ಅಡಿಪಾಯ ಹಾಕಿರುವ ಅವರು ಯುವಕರಿಗೆ ಸ್ಫೂರ್ತಿಯಾಗಿದ್ದಾರೆ ಹೇಳಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿ ಕೆ.ಆರ್.ಮಂಜುನಾಥ್ ಅವರು, ವೃತ್ತಿಯಲ್ಲಿ ಶ್ರಮ ಮತ್ತು ತಾಳ್ಮೆ ಮುಖ್ಯ. ನಾವು ಮಾಡುವ ಹುದ್ದೆಗೆ ಗೌರವ ನೀಡಿ ಕೆಲಸ ಮಾಡಿದರೆ ಹೆಜ್ಜೆ ಗುರುತು ಉಳಿಯಲಿದೆ. ಕಳೆದ 40 ವರ್ಷದಿಂದಲೂ ವೃತ್ತಿ ಜೀವನ ಮುಂದುವರಿಸಿಕೊಂಡು ಬಂದಿದ್ದೇನೆ.

» ನಾಲ್ಕನೇ ಪುಟದಲ್ಲಿ

## ಪುರದಮ್ಮ ದೇವಾಲಯ ಸುತ್ತಮುತ್ತ ನೆಟ್‌ವರ್ಕ್ ಸಮಸ್ಯೆ

• ಪ್ರಜೋದಯ ವರದಿ

**ಹಾಸನ:** ದೇವಿಯ ದರ್ಶನಕ್ಕಾಗಿ ಸಾವಿರಾರು ಭಕ್ತರು ಸೇರುವ ಜಿಲ್ಲೆಯ ಪ್ರಸಿದ್ಧ ಶ್ರೀ ಪುರದಮ್ಮ ದೇವಸ್ಥಾನ ಆವರಣದಲ್ಲಿ ಮೊಬೈಲ್ ನೆಟ್‌ವರ್ಕ್ ಸಮಸ್ಯೆ ಗಂಭೀರ ಸ್ವರೂಪ ಪಡೆದುಕೊಂಡಿದೆ. ಮೊಬೈಲ್ ಕರೆ, ಇಂಟರ್‌ನೆಟ್‌ಗೆ ನೆಟ್‌ವರ್ಕ್ ಸಿಗದೆ ಭಕ್ತರು ಹಾಗು ಸ್ಥಳೀಯರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.



ತಾಲ್ಲೂಕಿನ ಸಾಲಗಾಮೆ ಹೋಬಳಿ ವ್ಯಾಪ್ತಿಯ ಬೀಕನಹಳ್ಳಿಯಲ್ಲಿರುವ ಈ ದೇವಸ್ಥಾನಕ್ಕೆ ಜಿಲ್ಲೆ , ಮಾತ್ರವಲ್ಲದೇ ಹೊರ ಜಿಲ್ಲೆ, ನೆರೆ ರಾಜ್ಯಗಳಿಂದಲೂ ಅಪಾರ ಸಂಖ್ಯೆಯ ಭಕ್ತರು ಆಗಮಿಸುತ್ತಾರೆ. ವಾರದ ವಿಶೇಷ ಪೂಜೆ ಮತ್ತು ತಿಂಗಳ ವಿಶೇಷ ಆಚರಣೆಗಳ ಸಂದರ್ಭಗಳಲ್ಲಿ ಭಕ್ತರ ಸಂಖ್ಯೆ ಹೆಚ್ಚಾಗುತ್ತಿದ್ದು, ಮೊಬೈಲ್ ನೆಟ್‌ವರ್ಕ್ ಸಂಪೂರ್ಣ ಕುಸಿಯುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ.

ಒಟ್ಟಾಗಿ ಬಂದ ಕುಟುಂಬ ಸದಸ್ಯರು ಅಥವಾ ಸ್ನೇಹಿತರನ್ನು ಹುಡುಕುವುದೇ ದೊಡ್ಡ ಸವಾಲಾಗಿದ್ದು, ಭಕ್ತರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. ದೂರದ ಊರುಗಳಿಂದ ಬರುವ ಭಕ್ತರು ತಮ್ಮ ಇರುವ ಸ್ಥಳವನ್ನು ಪರಿಚಿತರಿಗೆ ತಿಳಿಸಲು ಸಾಧ್ಯವಾಗುತ್ತಿಲ್ಲ. ತುರ್ತು ಆರೋಗ್ಯ ಸಮಸ್ಯೆ ಉಂಟಾದರೂ ಕರೆ ಮಾಡಲು ನೆಟ್‌ವರ್ಕ್ ಸಿಗದೆ ಆತಂಕ ಎದುರಾಗುತ್ತಿದೆ. ವಿಶೇಷ ದಿನಗಳಲ್ಲಿ ಪರಿಸ್ಥಿತಿ ಇನ್ನಷ್ಟು ಗಂಭೀರವಾಗುತ್ತದೆ. ಕನಿಷ್ಠ ಒಂದು ಸ್ಥಿರ ಟವರ್ ವ್ಯವಸ್ಥೆ ಮಾಡಬೇಕು ಎಂದು ಸ್ಥಳೀಯ ನಿವಾಸಿಗಳು ಒತ್ತಾಯಿಸಿದ್ದಾರೆ.

ಭಕ್ತರ ಸುರಕ್ಷತೆ ಹಾಗು ತುರ್ತು ಸೇವೆಗಳ ದೃಷ್ಟಿಯಿಂದ ದೇವಸ್ಥಾನ ವ್ಯಾಪ್ತಿಯಲ್ಲಿ ಹೆಚ್ಚುವರಿ ಮೊಬೈಲ್ ಟವರ್ ಅಥವಾ ಶಕ್ತಿಶಾಲಿ ನೆಟ್‌ವರ್ಕ್ ವ್ಯವಸ್ಥೆ ಕಲ್ಪಿಸಬೇಕೆಂದು ಸಾರ್ವಜನಿಕರು ದೂರಸಂಪರ್ಕ ಇಲಾಖೆ ಮತ್ತು ಜಿಲ್ಲಾಡಳಿತವನ್ನು ಆಗ್ರಹಿಸಿದ್ದಾರೆ.

## ಮುನ್ನೆಚ್ಚರಿಕೆ ಕ್ರಮಕ್ಕೆ ಕರವೇ ಮನವಿ



• ಪ್ರಜೋದಯ ವರದಿ

**ಸಕಲೇಶಪುರ:** ಮುಂಗಾರು ಹತ್ತಿರವಾಗುತ್ತಿರುವ ಹಿನ್ನಲೆ ಮುನ್ನೆಚ್ಚರಿಕೆ ಕ್ರಮವಾಗಿ ರಸ್ತೆ ಬದಿಯ ಅಪಾಯಕಾರಿ ಮರಗಳನ್ನು ತೆರವುಗೊಳಿಸುವಂತೆ ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಶೆಟ್ಟಿ ಬಣ) ಯಿಂದ ಅರಣ್ಯ ಇಲಾಖೆಗೆ ಮನವಿ ಸಲ್ಲಿಸಲಾಯಿತು.

ತಾಲ್ಲೂಕಿನಲ್ಲಿ ಕಾಡಾನೆ ಹಾವಳಿ ಇರುವ ಗ್ರಾಮಗಳಲ್ಲಿ ವಿದ್ಯುತ್ ಕಂಬದಲ್ಲಿ ಕೆಳಮಟ್ಟದಲ್ಲಿರುವ ತಂತಿಗಳನ್ನು ತಕ್ಷಣ ಪರಿಶೀಲಿಸಿ ದುರಸ್ತಿ ಮಾಡಬೇಕು. ಪ್ರತಿವರ್ಷ ವಿದ್ಯುತ್ ಶಾಕ್‌ಗೆ ಆನೆಗಳು, ಮಾನವರು ಹಾಗು ಜಾನುವಾರುಗಳು ಪ್ರಾಣ ಕಳೆದುಕೊಳ್ಳುತ್ತಿರುವ ಘಟನೆಗಳು ಮರುಕಳಿಸುತ್ತಿದ್ದು, ಅರಣ್ಯ ಇಲಾಖೆ ಸೂಕ್ತ ಕ್ರಮ ಕೈಗೊಳ್ಳವತ್ತ ಗಮನ ಹರಿಸಬೇಕೆಂದು ಒತ್ತಾಯಿಸಿದರು.

# ಕೃಷಿಯಲ್ಲಿ ರೈತರು ಸ್ವಾವಲಂಬಿಗಳಾಗಬೇಕು

## ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಚಂದ್ರಶೇಖರ್ ಸಲಹೆ

• ಪ್ರಜೋದಯ ವರದಿ

**ಹಾಸನ:** ರಸಗೊಬ್ಬರ ಹಾಗು ಕೃಷಿ ಪರಿಕರಗಳ ಕೊರತೆ ಹೆಚ್ಚುತ್ತಿರುವ ಹಿನ್ನಲೆಯಲ್ಲಿ ರೈತರು ಸ್ವಾವಲಂಬಿಗಳಾಗ ಬೇಕಾದ ಅಗತ್ಯವಿದೆ. ಕೃಷಿ ತ್ಯಾಜ್ಯಗಳನ್ನು ಬಳಸಿಕೊಂಡು ಹಸಿರೆಲೆ ಗೊಬ್ಬರ, ಎರೆಹುಳು ಗೊಬ್ಬರ, ಹಸುವಿನ ಗೊಬ್ಬರ, ಜೀವಾಮೃತ ಸೇರಿ ಸಸ್ಯ ಹಾಗು ಪ್ರಾಣಿ ಜನ್ಯದಿಂದ ಕೀಟನಾಶಕ ತಯಾರಿಸಿ ಬಳಸಬೇಕೆಂದು ಕೃಷಿ ಪಂಡಿತ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಚಂದ್ರಶೇಖರ್ ಅವರು ಹೇಳಿದರು.



ನಗರದ ಜಂಟಿ ಕೃಷಿ ನಿರ್ದೇಶಕರ ಕಚೇರಿಯಲ್ಲಿ ಜಿಲ್ಲಾ ಕೃಷಿಕ ಸಮಾಜದ ಕಾರ್ಯಕಾರಿ ಸಮಿತಿ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ರೈತರು ಸ್ಥಳೀಯ ಜಾನುವಾರುಗಳನ್ನು, ವಿಶೇಷವಾಗಿ ದೇಸಿ ಹಸುಗಳನ್ನು ಬಳಸಿಕೊಂಡು ಕೃಷಿ ಕೈಗೊಳ್ಳುವ ಮೂಲಕ ಮಣ್ಣಿನ ಫಲವತ್ತತೆ ಕಾಪಾಡಿಕೊಳ್ಳಬಹುದಾಗಿದೆ ಎಂದು ಸಲಹೆ ನೀಡಿದರು.

ರೈತರು ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕ ಬಳಕೆಯಿಂದ ದೂರವಿದ್ದು, ಪ್ರಕೃತಿ ಆಧಾರಿತ ನೈಸರ್ಗಿಕ ಮತ್ತು ಸಾವಯವ ಕೃಷಿ ಪದ್ಧತಿ ಅಳವಡಿಸಿಕೊಂಡರೆ ಮಾತ್ರ ಕೃಷಿ ಸುಸ್ಥಿರವಾಗಲು ಸಾಧ್ಯ. ಬೀಜ ಸಂಸ್ಕರಣೆ ಮೂಲಕ ರೈತರು ಸ್ವಂತ ಬೀಜೋತ್ಪಾದನೆ ಮಾಡಿಕೊಂಡು ವಿಷಮುಕ್ತ ಹಾಗೂ ಆರೋಗ್ಯಕರ ಆಹಾರ ಉತ್ಪನ್ನಗಳನ್ನು ಸಮಾಜಕ್ಕೆ ನೀಡಬೇಕು. ನೈಸರ್ಗಿಕ ಕೃಷಿಯಿಂದ ಪರಿಸರ ಸಂರಕ್ಷಣೆ ಜೊತೆಗೆ ರೈತರ ಆದಾಯವೂ ಹೆಚ್ಚಲಿದೆ ಎಂದು ಹೇಳಿದರು.

» ನಾಲ್ಕನೇ ಪುಟದಲ್ಲಿ

## ಬೆಲೆ ಕುಸಿತದಿಂದ ಬೆಳೆಗಾರ ಕಂಗಾಲು | ಕೆ.ಜಿ.ಗೆ ಕೇವಲ 50 ರೂ.

# ಮಾರುಕಟ್ಟೆಗೆ ಲಗ್ಗೆ ಇಟ್ಟ ಹಣ್ಣುಗಳ ರಾಜ ಮಾವು

-ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

**ಹಾಸನ:** ಹಣ್ಣುಗಳ ರಾಜ ಎಂದೇ ಖ್ಯಾತಿ ಪಡೆದಿರುವ ಮಾವು ಯಥೇಚ್ಛ ಪ್ರಮಾಣದಲ್ಲಿ ಮಾರುಕಟ್ಟೆಗೆ ಲಗ್ಗೆ ಇಟ್ಟಿದ್ದು, ಬೆಲೆ ಇಳಿಕೆಯಿಂದ ಗ್ರಾಹಕರಿಗೆ ಸಂತಸವಾಗಿದ್ದರೆ ಬೆಳೆಗಾರರು ಕಂಗಾಲಾಗಿದ್ದಾರೆ.





ಕಳೆದ 15 ದಿನಗಳ ಹಿಂದೆ ಪ್ರತಿ ಕೆ.ಜಿ.ಗೆ 150 ರಿಂದ 200 ರೂ.ಗೆ ಮಾರಾಟವಾಗುತ್ತಿದ್ದ ಮಾವು ಪ್ರಸ್ತುತ 40 ರಿಂದ 50 ರೂ.ಗೆ ಲಭ್ಯವಾಗುತ್ತಿದೆ. ಗುರುವಾರ ಬೆಳಿಗ್ಗೆ 7ರ ಸಮಯದಲ್ಲಿ ನಗರದ ಮಹಾವೀರ ವೃತ್ತದಲ್ಲಿ ಕೆ.ಜಿ.ಗೆ ಕೇವಲ 40 ರೂ.ನಂತೆ ಮಾರಾಟವಾಯಿತು. ಬೆಲೆ ಕುಸಿತದಿಂದ ಗ್ರಾಹಕರು ಮುಗಿ ಬಿದ್ದು ಖರೀದಿಯಲ್ಲಿ ತೊಡಗಿದ್ದರು.

ನಾನಾ ತಳಿಗಳ ಮಾವಿನ ಹಣ್ಣು ಏಕಕಾಲಕ್ಕೆ ಮಾರುಕಟ್ಟೆಗೆ ಪ್ರವೇಶಿಸಿದ್ದರಿಂದ ಬೆಲೆ ಕಡಿಮೆಯಾಗಿದೆ ಎನ್ನಲಾಗಿದೆ. ಈ ಬಾರಿ ನಿರೀಕ್ಷೆಯಂತೆ ಮಾವಿನ ಇಳುವರಿ ಹೆಚ್ಚಿದೆ. ಜಿಲ್ಲೆಯ 2500 ಹೆಕ್ಟೇರ್‌ಗೂ ಹೆಚ್ಚು ಪ್ರದೇಶದಲ್ಲಿ ಉತ್ತಮ ಫಸಲು ಬಂದಿದೆ. ಕೋಲಾರ, ರಾಮನಗರ, ತಿಪಟೂರು ಭಾಗದಿಂದ ನಿತ್ಯ ಹತ್ತಾರು ಲೋಡ್ ಮಾವು ಜಿಲ್ಲೆಗೆ ಬರುತ್ತಿದೆ. ಬಣ್ಣ, ರುಚಿ ಇದ್ದು, ಪ್ರಮುಖ ರಸ್ತೆಯ ಇಕ್ಕೆಲಗಳಲ್ಲಿ ಮಾವಿನ ಹಣ್ಣು ಮಾರಾಟ ಮಾಡಲಾಗುತ್ತಿದೆ.

ನೀಲಂ, ಬಾದಾಮಿ, ರಸಪೂರಿ, ಮಲಗೋಬಾ ಮತ್ತಿತರ ಹಣ್ಣುಗಳು ಯಥೇಚ್ಛವಾಗಿ ಮಾರುಕಟ್ಟೆಯಲ್ಲಿ ಲಭ್ಯವಿದ್ದರೂ ಕೊಳ್ಳುವವರ ಸಂಖ್ಯೆ ಕ್ಷೀಣಿಸಿರುವುದು ಅಚ್ಚರಿಯ ಸಂಗತಿ ಎನ್ನುತ್ತಾರೆ ವ್ಯಾಪಾರಿಗಳು. ಇಳುವರಿ ಕಡಿಮೆ ಇದ್ದಾಗ ಗ್ರಾಹಕರು ಬೆಲೆ ಕೇಳಿಯೇ ಬೆಚ್ಚಿ ಬೀಳುತ್ತಾರೆ. ಈ ಬಾರಿ ಗುಣಮಟ್ಟದ ಹಾಗು ಅತ್ಯಂತ ಸಿಹಿಯಾದ ಹಣ್ಣು ಕೂಡ ಮಾರುಕಟ್ಟೆಗೆ ಬಂದಿದೆ. ಆದರೆ ಕೊಳ್ಳುವವರ ಸಂಖ್ಯೆ ಗಣನೀಯವಾಗಿ ಇಳಿಕೆಯಾಗಿದೆ.

ಈ ಬಾರಿ ಮಹಾರಾಷ್ಟ್ರದಲ್ಲಿ ಅಧಿಕ ಇಳುವರಿ ಬಂದಿರುವ ಕಾರಣ ಮಹಾರಾಷ್ಟ್ರ, ಗುಜರಾತ್, ಆಂಧ್ರ, ತಮಿಳುನಾಡಿನ ತಂಪು ಪಾನೀಯ ಕಾರ್ಖಾನೆಗಳಲ್ಲೂ ಕರ್ನಾಟಕದ ಹಣ್ಣಿಗೆ ಬೇಡಿಕೆ ಕಡಿಮೆಯಾಗಿದೆ ಎನ್ನಲಾಗಿದೆ.

**ಅಕಾಲಿಕ ಮಳೆಯಿಂದ ತೊಂದರೆ**

ಜಿಲ್ಲೆಯ ಅರಸೀಕೆರೆ, ಚನ್ನರಾಯಪಟ್ಟಣ ಹಾಗು ಹಾಸನದ ಸ್ವಲ್ಪ ಭಾಗದಲ್ಲಿ ಮಾವು ಬೆಳೆಯಲಾಗುತ್ತದೆ. ಕಳೆದ ಕೆಲವು ದಿನಗಳ ಹಿಂದೆ ಸುರಿದ ಅಕಾಲಿಕ ಮಳೆಯೂ ಬೆಲೆ ಕುಸಿತಕ್ಕೆ ಕಾರಣವೆಂದು ತಿಳಿದುಬಂದಿದೆ.

ಆಲಿಕಲ್ಲು ಮಳೆ, ಬಿರುಗಾಳಿಯಿಂದ ಮಾವು ಬೆಳೆಗೆ ಹಾನಿಯುಂಟಾಯಿತು. ಇನ್ನೇನು ಮರದಿಂದ ನೆಲಕ್ಕೆ ಉದುರಿ ಬೀಳುತ್ತವೆಂಬ ಭಯ ಬೆಳೆಗಾರರಲ್ಲಿ ಆವರಿಸಿತು. ಆದ್ದರಿಂದ ಅವಧಿಗೂ ಮೊದಲೇ ಮಾವು ಕೆಡವಿ ಮಾರಾಟಕ್ಕೆ ಮುಂದಾದರು. ಹೀಗಾಗಿ ಇನ್ನು ಹದಿನೈದು ದಿನಗಳ ಬಳಿಕ ಮಾರುಕಟ್ಟೆಗೆ ಬರಬೇಕಿದ್ದ ಪದಾರ್ಥ ಈಗಲೇ ಮಾರುಕಟ್ಟೆಯನ್ನು ಆವರಿಸಿಕೊಂಡಿದೆ.

**ಮೋಸದ ವ್ಯಾಪಾರಕ್ಕೆ ಬಲಿಯಾಗಬೇಡಿ**

ಪ್ರಸ್ತುತ ಮಾರುಕಟ್ಟೆಯಲ್ಲಿ ಸಿಗುತ್ತಿರುವ ಮಾವು ಬಹುತೇಕ ಗುಣಮಟ್ಟದ್ದಾಗಿದೆ. ರಸಪೂರಿ ಮಾವಿಗೆ ಮಾತ್ರ ಸ್ವಲ್ಪ ಬೆಲೆ ಅಧಿಕ ಎನ್ನಬಹುದು. ಆದರೆ, ಗ್ರಾಹಕರ ಅಮಾಯಕತೆಯನ್ನು ಬಲಿ ಪಡೆಯುತ್ತಿರುವ ಕೆಲವು ವ್ಯಾಪಾರಿಗಳು ಕಳಪೆ ಗುಣಮಟ್ಟದ ಮಾವು ಮಾರಾಟ ಮಾಡಿ ಆರೋಗ್ಯದ ಮೇಲೆ ಸವಾರಿ ಮಾಡುತ್ತಿರುವ ಘಟನೆಗಳು ಬೆಳಕಿಗೆ ಬಂದಿವೆ.

> **ಜಿಲ್ಲೆಯ ಅರಸೀಕೆರೆ, ಚನ್ನರಾಯಪಟ್ಟಣ ಹಾಗು ಹಾಸನ ವ್ಯಾಪ್ತಿಯಲ್ಲಿ ಮಾವು ಬೆಳೆಯಲಾಗುತ್ತದೆ. ಈ ಬಾರಿ 2500 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಕೈಗೊಳ್ಳಲಾಗಿದೆ. ಜಿಲ್ಲೆಗೆ ಹೊರ ಜಿಲ್ಲೆಯಿಂದ ಹೆಚ್ಚಿನ ಪ್ರಮಾಣದಲ್ಲಿ ಪದಾರ್ಥ ಬರುತ್ತದೆ. ಬೆಲೆ ಕುಸಿತದಿಂದ ಬೆಳೆಗಾರರು ಸಮಸ್ಯೆಗೆ ಸಿಲುಕಿದ್ದಾರೆ.**
>
> **-ಯೋಗೇಶ್, ತೋಟಗಾರಿಕೆ ಇಲಾಖೆ ಉಪನಿರ್ದೇಶಕ**


ಗೂಡ್ಸ್ ವಾಹನಗಳಲ್ಲಿ ಮಾವು ಮಾರಾಟಕ್ಕೆ ಬರುವ ವ್ಯಾಪಾರಿಗಳು 100 ರೂ.ಗೆ 4 ಕೆ.ಜಿ. ಕೊಡುತ್ತಿದ್ದಾರೆ. ಆದರೆ, ಅದು ಸಂಪೂರ್ಣ ಕಳಪೆ ಪದಾರ್ಥವಾಗಿದ್ದು, ಸಾರ್ವಜನಿಕರು ಖರೀದಿಸಿ ಮೋಸ ಹೋಗುತ್ತಿದ್ದಾರೆ. ಮಾವು ಖರೀದಿಸುವ ಮುನ್ನ ಎಚ್ಚರ ವಹಿಸುವುದು ಅತ್ಯಗತ್ಯವಾಗಿದೆ.

ಪ್ರಸ್ತುತ ದಿನಗಳಲ್ಲಿ ಬಿಸಿಲಿನ ಪ್ರಖರತೆ ಹೆಚ್ಚಿದ್ದು, ಅತಿಯಾದ ಮಾವಿನ ಹಣ್ಣು ಸೇವನೆಯೂ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಲಿದೆ. ಮಕ್ಕಳಿಗೆ ಹಣ್ಣು ನೀಡಿದರೂ ಅದು ಕಡಿಮೆ ಪ್ರಮಾಣದಲ್ಲಿರಬೇಕೆಂದು ತಜ್ಞರು ಅಭಿಪ್ರಾಯಪಡುತ್ತಾರೆ.

## ಗ್ರಾ.ಪಂ. ಬಿಲ್ ಕಲೆಕ್ಟರ್ ಲೋಕಯುಕ್ತ ಬಲೆಗೆ

• ಪ್ರಜೋದಯ ವರದಿ

**ಅರಕಲಗೂಡು :** ಇ-ಸ್ವತ್ತು ಮಾಡಿಕೊಡಲು ಲಂಚಕ್ಕೆ ಬೇಡಿಕೆ ಇಟ್ಟಿದ್ದ ಗ್ರಾಮ ಪಂಚಾಯಿತಿ ಬಿಲ್ ಕಲೆಕ್ಟರ್ ಲಂಚ ಪಡೆಯುವ ವೇಳೆ ಲೋಕಾಯುಕ್ತ ಅಧಿಕಾರಿಗಳ ಬಲೆಗೆ ಬಿದ್ದಿದ್ದಾನೆ.



ತಾಲ್ಲೂಕಿನ ಮಲ್ಲಿಪಟ್ಟಣ ಗ್ರಾಮ ಪಂಚಾಯಿತಿ ಬಿಲ್ ಕಲೆಕ್ಟರ್ ಹರೀಶ್ ಲಂಚ ಪಡೆಯು ತ್ತಿದ್ದಾಗ ಸಿಕ್ಕಿಬಿದ್ದ ಆರೋಪಿ. ಸೋಮಶೇಖರ್ ಎಂಬುವವರು ಇ-ಸ್ವತ್ತು ಪಡೆದುಕೊಳ್ಳಲು ಗ್ರಾಮ ಪಂಚಾಯಿತಿಗೆ ತೆರಳಿದ್ದ ವೇಳೆ ಬಿಲ್ ಕಲೆಕ್ಟರ್ 48 ಸಾವಿರ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದಾನೆ. ಈ ಸಂಬಂಧ ಸೋಮಶೇಖರ್ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ಲಂಚದ ಹಣ ಪಡೆಯುವಾಗ ಸರಿಯಾದ ಸಮಯಕ್ಕೆ ದಾಳಿ ನಡೆಸಿದ ಪೊಲೀಸರು, ಭ್ರಷ್ಟನನ್ನು ಬಲೆ ಬೀಳಿಸುವಲ್ಲಿ ಯಶಸ್ವಿಯಾಗಿದೆ. ಲೋಕಾಯುಕ್ತ ಎಸ್‌ಪಿ ಬಿ.ಎನ್.ನಂದಿನಿ ಅವರ ಮಾರ್ಗದರ್ಶನದಲ್ಲಿ ಇನ್ಸ್‌ಪೆಕ್ಟರ್ ಶಿಲ್ಪ ಅವರ ನೇತೃತ್ವದ ತಂಡ ದಾಳಿ ನಡೆಸಿತ್ತು.

**ಬೇಕಾಗಿದ್ದಾರೆ**

ಹಾಸನದ ಫ್ಯಾಕ್ಟರಿಗಳಲ್ಲಿ ಕಾರ್ಯನಿರ್ವಹಿಸಲು ಕೆಳಕಂಡ ಅಭ್ಯರ್ಥಿಗಳು ಬೇಕಾಗಿದ್ದಾರೆ.

1) ಫೀಲ್ಡ್ ಆಫೀಸರ್

★ ಕನಿಷ್ಠ 3 ವರ್ಷಗಳ ಅನುಭವ, ★ಮ್ಯಾನ್ ಪವರ್ ನಿರ್ವಹಿಸುವ ಸಾಮರ್ಥ್ಯ ★ ಆಕರ್ಷಕ ವೇತನ ನೀಡಲಾಗುವುದು.

ಆಸಕ್ತರು ಸಂಪರ್ಕಿಸಿ

88848 00010

E-mail : prajodayahsn@gmail.com

ಪ್ರಜೋದಯ

22 ಮೇ 2026 ಶುಕ್ರವಾರ

ಸಿನಿ ಪ್ರಭಾ

# ದೃಶ್ಯಂ 3, ಕುಚುಕು ಇನ್ನಷ್ಟು ಹೊಸ ಚಿತ್ರಗಳ ಬಿಡುಗಡೆ

ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುತ್ತಿರುವ ಬಾಲಿವುಡ್ ಚಲನಚಿತ್ರಗಳು

**ಸೆಪ್ಟೆಂಬರ್ 21 - ಮೇ 22:** ಸೆಪ್ಟೆಂಬರ್ 21 ಕರೆನ್ ಕ್ಷಿತಿ ಸುವರ್ಣ ನಿರ್ದೇಶನದ ಮುಂಬರುವ ಹಿಂದಿ-ಕನ್ನಡ ಭಾವನಾತ್ಮಕ ನಾಟಕವಾಗಿದೆ. ಈ ಚಿತ್ರದಲ್ಲಿ ಪ್ರವೀಣ್ ಸಿಂಗ್ ಸಿಸೋಡಿಯಾ, ಪ್ರಿಯಾಂಕಾ ಉಪೇಂದ್ರ, ಜರೀನಾ ವಹಾಬ್ ಮತ್ತು ಅಮಿತ್ ಬೆಹ್ಲ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಆಲ್ಝೈಮರ್ ಕಾಯಿಲೆಯಿಂದ ಬಳಲುತ್ತಿರುವ ಆರೈಕೆದಾರರು ಎದುರಿಸುವ ಭಾವನಾತ್ಮಕ ಹೋರಾಟಗಳ ಸುತ್ತ ಸುತ್ತುವ ಈ ಚಿತ್ರವು ಮೇ 22 ರಂದು ಅಧಿಕೃತವಾಗಿ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ.

**ತೀಸ್ರಿ ಬೇಗಂ - ಮೇ 22:** ತೀಸ್ರಿ ಬೇಗಂ ಕೆ.ಸಿ. ಬೊಕಾಡಿಯಾ ಬರೆದು ನಿರ್ದೇಶಿಸಿರುವ ಮುಂಬರುವ ಹಿಂದಿ ಸಾಮಾಜಿಕ ನಾಟಕ. ಈ ಚಿತ್ರದಲ್ಲಿ ಮುಗ್ಧಾ ಗೋಡ್ಸೆ, ಜರೀನಾ ವಹಾಬ್, ಕೆವಿನ್ ಗಾಂಧಿ ಮತ್ತು ರಚನಾ ಶ್ಯಾಮ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಭಾವನಾತ್ಮಕ ಸಂಘರ್ಷಗಳು ಮತ್ತು ಮಹಿಳಾ ಆಧಾರಿತ ಕಥೆ ಹೇಳುವಿಕೆಯ ಸುತ್ತ ಕೇಂದ್ರೀಕೃತವಾಗಿರುವ ಈ ಚಿತ್ರವು ಮೇ 22 ರಂದು ಅಧಿಕೃತವಾಗಿ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲು ಸಜ್ಜಾಗಿದೆ.

ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುತ್ತಿರುವ ಮಲಯಾಳಂ ಚಲನಚಿತ್ರಗಳು

**ದೃಶ್ಯಂ 3 - ಮೇ 21:** ದೃಶ್ಯಂ 3 ಮಲಯಾಳಂನ ಮುಂಬರುವ ಕ್ರೈಮ್ ಥ್ರಿಲ್ಲರ್ ಆಗಿದ್ದು, ಜೀತು ಜೋಸೆಫ್ ಬರೆದು ನಿರ್ದೇಶಿಸಿದ್ದಾರೆ. ಈ ಚಿತ್ರದಲ್ಲಿ ಮೋಹನ್ ಲಾಲ್, ಮೀನಾ, ಅನ್ಸಿಬಾ ಹಾಸನ್, ಎಸ್ತರ್ ಅನಿಲ್, ಸಿದ್ದಿಕ್ ಮತ್ತು ಆಶಾ ಶರತ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಆಶೀರ್ವಾದ್ ಸಿನಿಮಾಸ್ ಬ್ಯಾನರ್ ಅಡಿಯಲ್ಲಿ ನಿರ್ಮಿಸಲಾದ, ಬಹು ನಿರೀಕ್ಷಿತ ಮೂರನೇ ಭಾಗವು ಜಾರ್ಜ್‌ಕುಟ್ಟಿ ಅವರ ರೋಮಾಂಚಕಾರಿ ಕಥೆಯನ್ನು ಮುಂದುವರೆಸಿದೆ ಮತ್ತು ಮೇ 21 ರಂದು ಅಧಿಕೃತವಾಗಿ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ.

**ದೋಸೆ - ಮೇ 22:** ದೋಸೆ ಮಲಯಾಳಂನ ಮುಂಬರುವ ಸೈಕಲಾಜಿಕಲ್ ಥ್ರಿಲ್ಲರ್ ಆಗಿದ್ದು, ಮೇ 22 ರಂದು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುವ ನಿರೀಕ್ಷೆಯಿದೆ. ಈ ಚಿತ್ರವು ತೀವ್ರವಾದ ಕಥೆ ಹೇಳುವ ಮೂಲಕ ಭಾವನಾತ್ಮಕ ಆಘಾತ, ಸಸ್ಪೆನ್ಸ್ ಮತ್ತು ಮಾನಸಿಕ ಸಂಘರ್ಷಗಳನ್ನು ಅನ್ವೇಷಿಸುತ್ತದೆ ಎಂದು ವರದಿಯಾಗಿದೆ.

ಥ್ರಿಲ್ಲರ್ ಅಂಶಗಳು ಮತ್ತು ಭಾವನಾತ್ಮಕ ನಾಟಕವನ್ನು ಒಳಗೊಂಡಿರುವ ಈ ಚಿತ್ರವು ಸಸ್ಪೆನ್ಸ್ ಪ್ರಿಯರನ್ನು ಆಕರ್ಷಿಸುವ ನಿರೀಕ್ಷೆಯಿದೆ.

ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುತ್ತಿರುವ ತೆಲುಗು ಚಲನಚಿತ್ರಗಳು

**ಅಗ್ಲಿ ಸ್ಟೋರಿ - ಮೇ 22:** ಅಗ್ಲಿ ಸ್ಟೋರಿ ಮುಂಬರುವ ತೆಲುಗು ರೊಮ್ಯಾಂಟಿಕ್ ಥ್ರಿಲ್ಲರ್ ಆಗಿದ್ದು, ಪ್ರಣವ ಸ್ವರೂಪ್ ಬರೆದು ನಿರ್ದೇಶಿಸಿದ್ದಾರೆ. ಈ ಚಿತ್ರದಲ್ಲಿ ಶ್ರೀ ನಂದು ಮತ್ತು ಅವಿಕಾ ಗೋರ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದರೆ, ರವಿ ತೇಜ ಮಹಾದಾಸ್ಯಮ್ ಮತ್ತು ಶಿವಾಜಿ ರಾಜಾ ಪೋಷಕ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಸಸ್ಪೆನ್ಸ್, ಪ್ರಣಯ ಮತ್ತು ಭಾವನಾತ್ಮಕ ಸಂಘರ್ಷಗಳನ್ನು ಒಳಗೊಂಡಿರುವ ಈ ಚಿತ್ರವು ಮೇ 22 ರಂದು ಅಧಿಕೃತವಾಗಿ ಥಿಯೇಟರ್‌ಗಳಲ್ಲಿ ಬಿಡುಗಡೆಯಾಗಲಿದೆ.

**ರಮಣಿ ಕಲ್ಯಾಣಂ - ಮೇ 22:** ರಮಣಿ ಕಲ್ಯಾಣಂ ವಿಜಯ್ ಆದಿರೆಡ್ಡಿ ನಿರ್ದೇಶನದ ಮುಂಬರುವ ತೆಲುಗು ಪ್ರಣಯ ನಾಟಕ. ಈ ಚಿತ್ರದಲ್ಲಿ ದೀಪ್ತಿಖಾ ಚಂದ್ರನ್ ಮತ್ತು ಸೂರ್ಯ ವಶಿಷ್ಠ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ, ಜೊತೆಗೆ ಶ್ರೀನಿವಾಸ ರೆಡ್ಡಿ ಮತ್ತು ಚೈತು ಜೊನ್ನಲಗಡ್ಡ ಪೋಷಕ ಪಾತ್ರಗಳಲ್ಲಿ ನಟಿಸಿದ್ದಾರೆ.

ಭಾವನಾತ್ಮಕವಾಗಿ ಗಾಯಗೊಂಡ ಇಬ್ಬರು ವ್ಯಕ್ತಿಗಳ ಸುತ್ತ ಸುತ್ತುವ ಈ ಚಿತ್ರವು ಅನಿರೀಕ್ಷಿತವಾಗಿ ಮತ್ತೆ ಒಂದಾಗುತ್ತದೆ, ಈ ಚಿತ್ರವು ಮೇ 22 ರಂದು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ.

**ಫಸ್ಟ್ ಟೈಮ್ - ಮೇ 22:** ಫಸ್ಟ್ ಟೈಮ್ ತೆಲುಗು ವೈಜ್ಞಾನಿಕ ಕಾಲ್ಪನಿಕ ನಿಗೂಢ ಥ್ರಿಲ್ಲರ್ ಆಗಿದ್ದು, ಇದನ್ನು ಹೇಮಂತ್ ಇಪ್ಪಲಪಲ್ಲಿ ನಿರ್ದೇಶಿಸಿದ್ದಾರೆ.

ಈ ಚಿತ್ರದಲ್ಲಿ ಸೌರಭ್ ಧಿಂಗ್ರಾ, ಅನಿಕಾ ವಿಕ್ರಾಮನ್, ಅಜಯ್ ರತ್ನಂ, ಮೈಮ್ ಗೋಪಿ ಮತ್ತು ಭೂಪಾಲ್ ರಾಜು ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಅನ್ಯಲೋಕದ ಆಕ್ರಮಣ ಪರಿಕಲ್ಪನೆಗಳನ್ನು ಅಲೌಕಿಕ ರಹಸ್ಯಗಳು ಮತ್ತು ಸಸ್ಪೆನ್ಸ್‌ಫುಲ್ ಕಥೆ ಹೇಳುವಿಕೆಯೊಂದಿಗೆ ಸಂಯೋಜಿಸಿರುವ ಈ ಚಿತ್ರವು ಮೇ 22 ರಂದು ಅಧಿಕೃತವಾಗಿ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುತ್ತಿದೆ.

**ಪುರುಷಹ - ಮೇ 22:** ಪುರುಷಹ ವೀರು ವುಲವಾಲ ನಿರ್ದೇಶನದ ಮುಂಬರುವ ತೆಲುಗು ಹಾಸ್ಯ-ನಾಟಕ. ಈ ಚಿತ್ರದಲ್ಲಿ ಪವನ್ ಕಲ್ಯಾಣ್ ಬಟ್ಟುಲ, ಸಪ್ತಗಿರಿ, ರಾಜ್ ಕುಮಾರ್ ಕಾಸಿರೆಡ್ಡಿ ಮತ್ತು ವೆನ್ನೆಲಾ ಕಿಶೋರ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ, ರಾಜೀವ್ ಕನಕಲಾ ಮತ್ತು ವಿಟಿವಿ ಗಣೇಶ್ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಸಂಬಂಧದ ಘರ್ಷಣೆಗಳು ಮತ್ತು ಭಾವನಾತ್ಮಕ ಹೋರಾಟಗಳನ್ನು ಎದುರಿಸುವ ನಾಲ್ಕು ವಿವಾಹಿತ ಪುರುಷರ ಸುತ್ತ ಸುತ್ತುವ ಈ ಚಿತ್ರವು ಮೇ 22 ರಂದು ಥಿಯೇಟರ್‌ಗಳಲ್ಲಿ ಬಿಡುಗಡೆಯಾಗಲಿದೆ.

ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುತ್ತಿರುವ ಕನ್ನಡ ಚಲನಚಿತ್ರಗಳು

**ಕುಚುಕು - ಮೇ 22:** ಕುಚುಕು ಕನ್ನಡದ ಮುಂಬರುವ ಪ್ರಣಯ ಮನರಂಜನಾ ಚಿತ್ರವಾಗಿದ್ದು, ಮೇ 22 ರಂದು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ. ಈ ಚಿತ್ರವು ಪ್ರಣಯ, ಹಾಸ್ಯ ಮತ್ತು ಕೌಟುಂಬಿಕ ಭಾವನೆಗಳನ್ನು ಯುವ ಕಥಾಹಂದರದೊಂದಿಗೆ ಬೆರೆಸುತ್ತದೆ ಎಂದು ವರದಿಯಾಗಿದೆ. ಮನರಂಜನಾ ಕ್ಷಣಗಳು ಮತ್ತು ಭಾವನಾತ್ಮಕ ನಾಟಕವನ್ನು ಒಳಗೊಂಡಿರುವ ಈ ಚಿತ್ರವು ಈ ವಾರಾಂತ್ಯದಲ್ಲಿ ಕನ್ನಡ ಪ್ರೇಕ್ಷಕರನ್ನು ಆಕರ್ಷಿಸುವ ಗುರಿಯನ್ನು ಹೊಂದಿದೆ.

**ಅಸುರನ ಕೈಯಲ್ಲಿ ಪಾರಿಜಾತ - ಮೇ 22:** ಅಸುರನ ಕೈಯಲ್ಲಿ ಪಾರಿಜಾತ ಮುಂಬರುವ ಕನ್ನಡ ಥ್ರಿಲ್ಲರ್ ನಾಟಕವಾಗಿದ್ದು, ಮೇ 22 ರಂದು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ. ಈ ಚಿತ್ರವು ಸಸ್ಪೆನ್ಸ್, ಭಾವನಾತ್ಮಕ ಸಂಬಂಧಗಳು ಮತ್ತು ಮಾನಸಿಕ ಸಂಘರ್ಷಗಳನ್ನು ಅನ್ವೇಷಿಸುತ್ತದೆ ಎಂದು ವರದಿಯಾಗಿದೆ. ಗಾಢವಾದ ಕಥೆ ಹೇಳುವಿಕೆ ಮತ್ತು ನಾಟಕೀಯ ಪ್ರದರ್ಶನಗಳೊಂದಿಗೆ, ಈ ಚಿತ್ರವು ಥ್ರಿಲ್ಲರ್ ಪ್ರಿಯರನ್ನು ಆಕರ್ಷಿಸುವ ನಿರೀಕ್ಷೆಯಿದೆ.

**ಲಾಕ್‌ಡೌನ್ - ಮೇ 22:** ಲಾಕ್‌ಡೌನ್ ಕನ್ನಡದ ಮುಂಬರುವ ಬದುಕುಳಿಯುವ ಥ್ರಿಲ್ಲರ್ ಆಗಿದ್ದು, ಮೇ 22 ರಂದು ಬಿಡುಗಡೆಯಾಗಲಿದೆ. ಈ ಚಿತ್ರವು ಭಾವನಾತ್ಮಕ ಹೋರಾಟಗಳು, ಸಸ್ಪೆನ್ಸ್ ಘಟನೆಗಳು ಮತ್ತು ಕಷ್ಟಕರ ಸಂದರ್ಭಗಳಲ್ಲಿ ಮಾನವ ಬದುಕುಳಿಯುವಿಕೆಯ ಮೇಲೆ ಕೇಂದ್ರೀಕರಿಸುತ್ತದೆ ಎಂದು ವರದಿಯಾಗಿದೆ. ಥ್ರಿಲ್ಲರ್ ಅಂಶಗಳನ್ನು ಭಾವನಾತ್ಮಕ ಕಥೆ ಹೇಳುವಿಕೆಯೊಂದಿಗೆ ಬೆರೆಸುವ ಈ ಚಿತ್ರವು ತೀವ್ರವಾದ ಸಿನಿಮೀಯ ಅನುಭವವನ್ನು ನೀಡುತ್ತದೆ ಎಂದು ನಿರೀಕ್ಷಿಸಲಾಗಿದೆ.

**ಉಗ್ರ ಮರ್ಧಿನಿ - ಮೇ 22:** ಉಗ್ರ ಮರ್ಧಿನಿ ಕನ್ನಡದ ಮುಂಬರುವ ಆಕ್ಷನ್ ನಾಟಕವಾಗಿದ್ದು, ಮೇ 22 ರಂದು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ. ಈ ಚಿತ್ರವು ಸೇಡು, ನ್ಯಾಯ ಮತ್ತು ಭಾವನಾತ್ಮಕ ಸಂಘರ್ಷಗಳ ಸುತ್ತ ಸುತ್ತುತ್ತದೆ ಎಂದು ವರದಿಯಾಗಿದೆ. ವಾಣಿಜ್ಯ ಮನರಂಜನಾ ಅಂಶಗಳನ್ನು ಒಳಗೊಂಡಿರುವ ಈ ಚಿತ್ರವು ಮಾಸ್ ಪ್ರೇಕ್ಷಕರನ್ನು ಆಕರ್ಷಿಸುವ ನಿರೀಕ್ಷೆಯಿದೆ.

ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುತ್ತಿರುವ ಹಾಲಿವುಡ್ ಚಲನಚಿತ್ರಗಳು

**ಸ್ಟಾರ್ ವಾರ್ಸ್: ದಿ ಮ್ಯಾಂಡಲೋರಿಯನ್ ಮತ್ತು ಗ್ರೋಗು - ಮೇ 22:** ಸ್ಟಾರ್ ವಾರ್ಸ್: ದಿ ಮ್ಯಾಂಡಲೋರಿಯನ್ ಮತ್ತು ಗ್ರೋಗು ಜಾನ್ ಫಾವ್ರೊ ನಿರ್ದೇಶಿಸಿದ ಮುಂಬರುವ ಹಾಲಿವುಡ್ ವೈಜ್ಞಾನಿಕ ಕಾಲ್ಪನಿಕ ಸಾಹಸ ಚಿತ್ರವಾಗಿದೆ. ಈ ಚಿತ್ರದಲ್ಲಿ ಪೆಡ್ರೊ ಪ್ಯಾಸ್ಕಲ್ ಡಿನ್ ಜಾರಿನ್ ಪಾತ್ರದಲ್ಲಿ ಸಿಗೌರ್ನಿ ವೀವರ್ ಮತ್ತು ಜೆರೆಮಿ ಅಲೆನ್ ವೈಟ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ.

ದಿ ಮ್ಯಾಂಡಲೋರಿಯನ್ ಸರಣಿಯಲ್ಲಿ ಸ್ಥಾಪಿತವಾದ ಕಥಾಹಂದರವನ್ನು ಮುಂದುವರೆಸುತ್ತಾ, ಬಹು ನಿರೀಕ್ಷಿತ ಸ್ಟಾರ್ ವಾರ್ಸ್ ಚಿತ್ರವು ಮೇ 22, 2026 ರಂದು ವಿಶ್ವಾದ್ಯಂತ ಥಿಯೇಟ್ರಿಕಲ್ ಬಿಡುಗಡೆಗೆ ಅಧಿಕೃತವಾಗಿ ನಿರ್ಧರಿಸಲಾಗಿದೆ.

> ಮೇ 2026 ರ ನಾಲ್ಕನೇ ವಾರವು ಭಾರತದಾದ್ಯಂತ ಹೊಸ ಥಿಯೇಟ್ರಿಕಲ್ ಮತ್ತು ಬಿಡುಗಡೆಗಳ ರೋಮಾಂಚಕಾರಿ ಸಾಲನ್ನು ತರುತ್ತದೆ. ದೃಶ್ಯಂ 3 ನಂತಹ ಆಕರ್ಷಕ ಥ್ರಿಲ್ಲರ್‌ಗಳು ಮತ್ತು ಸ್ಟಾರ್ ವಾರ್ಸ್‌ನಂತಹ ಆಕ್ಷನ್-ಪ್ಯಾಕ್ಡ್ ಎಂಟರ್‌ಟೈನರ್‌ಗಳಿಂದ ಹಿಡಿದು ಸತಿ ಲೀಲಾವತಿಯಂತಹ ಟ್ರೆಂಡಿಂಗ್ ಪ್ರೀಮಿಯರ್‌ಗಳವರೆಗೆ, ಪ್ರೇಕ್ಷಕರು ಈ ವಾರ ಸಂಪೂರ್ಣ ಮನರಂಜನಾ ಪ್ಯಾಕೇಜ್ ಅನ್ನು ನಿರೀಕ್ಷಿಸಬಹುದು. ಪ್ರಮುಖ ಚಲನಚಿತ್ರಗಳು ಮತ್ತು ವೆಬ್ ಸರಣಿಗಳು ಚಿತ್ರಮಂದಿರಗಳಲ್ಲಿ ಚಲನಚಿತ್ರ ಪ್ರಿಯರು ತೆಲುಗು, ತಮಿಳು, ಹಿಂದಿ, ಮಲಯಾಳಂ, ಕನ್ನಡ ಮತ್ತು ಇಂಗ್ಲಿಷ್ ಸೇರಿದಂತೆ ಬಹು ಭಾಷೆಗಳಲ್ಲಿ ವೀಕ್ಷಿಸಲು ಸಾಕಷ್ಟು ತಾಜಾ ವಿಷಯವನ್ನು ಹೊಂದಿದ್ದಾರೆ.



## ಟಾಕ್ಸಿಕ್‌ನಲ್ಲಿ ಯಶ್ ಮತ್ತೊಂದು ಲುಕ್ ನೋಡಿದ್ರಾ?


# ರಾಯ ಮಾಫಿಯಾ ಡಾನ್ ಅನ್ನೋದು ಕನ್ಫರ್ಮ್

ಕೆಜಿಎಫ್ 2ನಲ್ಲಿ ಯಶ್ ನೋಡಿ ಕಣ್ತುಂಬಿಕೊಂಡಿದ್ದ ಅಭಿಮಾನಿಗಳಿಗೆ ಮತ್ತೊಂದು ಸಿನಿಮಾದಲ್ಲಿ ಅವರನ್ನು ನೋಡುವ ಭಾಗ್ಯ ಇನ್ನೂ ಸಿಕ್ಕಿಲ್ಲ. ಯಾಕಂದ್ರೆ, ಟಾಕ್ಸಿಕ್ ಅದ್ಯಾವಾಗ ರಿಲೀಸ್ ಆಗುತ್ತೆ ಅನ್ನೋದೇ ಗೊತ್ತಿಲ್ಲ. ಈಗಾಗಲೇ ಎರಡು ಬಾರಿ ಸಿನಿಮಾ ರಿಲೀಸ್ ಪೋಸ್ಟ್‌ಪೋನ್ ಆಗಿದೆ. ಮಾರ್ಚ್ 19 ರಿಂದ ಜೂನ್ 4ಕ್ಕೆ ಮುಂದೂಡಿಕೆ ಆಯ್ತು. ಅಲ್ಲಿಂದ ಇಲ್ಲಿವರೆಗೂ ಟಾಕ್ಸಿಕ್ ರಿಲೀಸ್ ಬಗ್ಗೆ ಚಿಕ್ಕದೊಂದು ಸುಳಿವು ಕೂಡ ಇಲ್ಲ.

ಯಶ್ ಅಭಿಮಾನಿಗಳಿಗೆ ಟಾಕ್ಸಿಕ್ ಪೋಸ್ಟ್‌ಪೋನ್ ಆಗಿದ್ದಕ್ಕೆ ನಿರಾಸೆ ಆಗಿದೆ. ಇನ್ನೇನು ಸಿನಿಮಾವನ್ನು ನೋಡೇ ಬಿಡ್ತೀವಿ ಅಂದ್ಕೊಂಡು ತುದಿಗಾಲಲ್ಲಿ ನಿಂತಿದ್ದರು. ಅಷ್ಟರಲ್ಲೇ ಯಶ್ ಮತ್ತೊಂದು ಅಪ್‌ಡೇಟ್ ಕೊಟ್ಟು ಬಿಟ್ಟರು. ಅದಕ್ಕೆ ಟಾಕ್ಸಿಕ್ ಇಷ್ಟ ಪಡುವವರಿಗೆ ಯಶ್ ಸರ್ಪ್ರೈಸ್ ಕೊಟ್ಟಿದ್ದಾರೆ. ಹೊಸ ಲುಕ್‌ನಲ್ಲಿ ಡಾನ್ ಲುಕ್‌ನಲ್ಲಿರೋ ಫೋಟೊಗಳನ್ನು ಶೇರ್ ಮಾಡಿದ್ದಾರೆ. ಇದು ಸದ್ಯ ಸೋಶಿಯಲ್ ಮೀಡಿಯಾ ಸಿಕ್ಕಾಪಟ್ಟೆ ಟ್ರೆಂಡಿಂಗ್‌ನಲ್ಲಿದೆ.

ಈ ಲುಕ್‌ನಲ್ಲಿ ಯಶ್ ಸಖತ್ ಸ್ಟೈಲಿಶ್ ಆಗಿ ಕಾಣಿಸಿಕೊಂಡಿದ್ದಾರೆ. ರೆಟ್ರೋ ಲುಕ್.. ಬಾಯಲ್ಲೊಂದು ಸಿಗರೇಟ್.. ದುಬಾರಿ ಕಾರು.. ಜೊತೆಗೊಂದಿಷ್ಟು ಬಾಡಿಗಾರ್ಡ್ಸ್.. ಅವರ ಕೈಯಲ್ಲಿ ಗನ್‌ಗಳು.. ಇದನ್ನೆಲ್ಲ ನೋಡಿದ್ರೆ, ಟಾಕ್ಸಿಕ್ ಇನ್ನೂ ದುಬಾರಿ ಆಗ್ತಿದೆ ಅನ್ನೋದರಲ್ಲಿ ಎರಡು ಮಾತಿಲ್ಲ. ಅಷ್ಟಕ್ಕೂ ಸಿನಿಮಾ ತಂಡ ಹೊರ ಬಿಟ್ಟಿರೋ ಈ ಫೋಟೊಗಳು ಏನು ಹೇಳುತ್ತಿವೆ? ಸಿನಿಮಾ ಬಗ್ಗೆ ಏನಿದು ಇನ್‌ಸೈಡ್ ಸ್ಟೋರಿ ತಿಳಿಯೋಕೆ ಮುಂದೆ ಓದಿ.

ಟಾಕ್ಸಿಕ್ ಸಿನಿಮಾವನ್ನು ಯಶ್ ಗ್ಲೋಬಲ್ ಲೆವೆಲ್‌ಗೆ ತೆಗೆದುಕೊಂಡು ಹೋಗ್ತಿದ್ದಾರೆ. ಅದಕ್ಕೆ ಬೇಕಿರೋ ಪೂರ್ವ ಸಿದ್ಧತೆಗಳು ಒಂದು ಹಂತಕ್ಕೆ ಆಗಿದೆ. ಗ್ಲೋಬಲ್ ರಿಲೀಸ್ ಮಾಡಬೇಕು ಅಂದರೆ, ಅದಕ್ಕೆ ತಕ್ಕಂತೆ ಸಿನಿಮಾದ ಕ್ವಾಲಿಟಿ ಇರಬೇಕು. ಹೀಗಾಗಿ ಯಶ್ ಕಾಂಪ್ರಮೈಸ್ ಆಗದೇ ಕೆಲವು ದೃಶ್ಯಗಳನ್ನು ರೀ-ಶೂಟ್ ಮಾಡುತ್ತಿದ್ದಾರೆ ಎಂದು ಈ ಹಿಂದೇನೆ ಹೇಳಿದ್ವಿ. ಈಗ ಕೂಡ ಟಾಕ್ಸಿಕ್ ರಿ-ಶೂಟ್ ಆಗ್ತಿದೆ ಅನ್ನೋ ಸುದ್ದಿನೇ ಮತ್ತೆ ಓಡಾಡ್ತಿದೆ.



ಭಾರತದ ಮೋಸ್ಟ್ ಎಕ್ಸ್ ಪೆಕ್ಟೆಡ್ ಸಿನಿಮಾ ಟಾಕ್ಸಿಕ್‌ಗಾಗಿ ಎಲ್ಲರೂ ಎದುರು ನೋಡುತ್ತಿದ್ದಾರೆ. ಹೀಗಾಗಿ ಆ ಕುತೂಹಲವನ್ನು ಮತ್ತಷ್ಟು ಹೆಚ್ಚಿಸುವುದಕ್ಕೆ ಸಿನಿಮಾ ತಂಡ ವರ್ಕಿಂಗ್ ಸ್ಟಿಲ್ಸ್ ಅನ್ನು ರಿಲೀಸ್ ಮಾಡಿದೆ. ಅದರಲ್ಲಿ ಯಶ್ ರಗಡ್-ಮಾಸ್ ಲುಕ್ ಕೂಡ ಸೇರಿಕೊಂಡಿದೆ. ಯಶ್ ಹಾಗೂ ಸೆಟ್‌ನ ಮೇಕಿಂಗ್ ಫೋಟೊಗಳು ಇಂಟರ್‌ನೆಟ್‌ನಲ್ಲಿ ಟ್ರೆಂಡ್ ಆಗುತ್ತಿವೆ. ಮತ್ತೆ ಟಾಕ್ಸಿಕ್ ಈಗ ಟಾಕ್ ಆಫ್ ದಿ ಟೌನ್ ಆಗಿದೆ.

ರಾಕಿ ಭಾಯ್ ಟಾಕ್ಸಿಕ್ ಲುಕ್ ಅನ್ನು ನೋಡಿದರೆ, ಯಶ್ ಮಾಫಿಯಾ ಗ್ಯಾಂಗ್‌ನ ಡಾನ್ ಪಾತ್ರದಲ್ಲಿ ಕಾಣಿಸಿಕೊಳ್ಳಬಹುದು ಎಂದು ಅಂದಾಜಿಸಲಾಗಿದೆ. ಈಗಾಗಲೇ ಯಶ್ ಕೆಲವೊಂದು ಸುಳಿವನ್ನು ಬಿಟ್ಟುಕೊಟ್ಟಿದ್ದಾರೆ. ಹೀಗಿದ್ದರೂ ಈ ಫೋಟೊಗಳು ಅಭಿಮಾನಿಗಳಲ್ಲಿ ಕುತೂಹಲವನ್ನು ಹುಟ್ಟಾಕಿದೆ. ಆದರೆ, ಯಶ್ ಸದ್ಯಕ್ಕೆ ಈ ಸಿನಿಮಾವನ್ನು ರಿಲೀಸ್ ಮಾಡುತ್ತಿಲ್ಲ. ಬದಲಾಗಿ ಬಿಗ್ ರಿಲೀಸ್‌ಗೆ ಪ್ಲ್ಯಾನ್ ಮಾಡಿದ್ದಾರೆಂದು ಹೇಳಲಾಗಿದೆ.

ಸದ್ಯಕ್ಕೆ ಸ್ಯಾಂಡಲ್‌ವುಡ್‌ನಲ್ಲಿ ಹರಿದಾಡುತ್ತಿರುವ ಸುದ್ದಿ ಏನಪ್ಪಾ ಅಂದರೆ, ಟಾಕ್ಸಿಕ್ ಡಿಸೆಂಬರ್ ತಿಂಗಳಿಗೆ ರಿಲೀಸ್ ಆಗುತ್ತಿದೆ. ಯಶ್‌ಗೆ ಡಿಸೆಂಬರ್ ತಿಂಗಳು ಲಕ್ಕಿ ಆಗಿದ್ದರಿಂದ ಸಿನಿಮಾವನ್ನು ಕ್ರಿಸ್‌ಮಸ್‌ಗೆ ರಿಲೀಸ್ ಮಾಡಲಿದೆ ಅನ್ನೋ ಮಾತು ಹೇಳಿ ಬರುತ್ತಿದೆ. ಆದರೆ, ಕೆವಿಎನ್ ಪ್ರೊಡಕ್ಷನ್ ಆಗಲಿ, ಯಶ್ ಆಗಲಿ ಅಧಿಕೃತವಾಗಿ ಎಲ್ಲೂ ಹೇಳಿಕೆ ಕೊಟ್ಟಿಲ್ಲ.

## ಅರವಿಂದ್ ಕೌಶಿಕ್ ಗ್ಯಾಂಗ್‌ಸ್ಟರ್ ಸಿನಿಮಾ ಕಂಟ್ರಿ ಮೇಡ್ 2; ಹೇಗಿದೆ ಟೀಸರ್?

ಅರ್ಧಂಬರ್ಧ ಪ್ರೇಮಕಥೆ ಚಿತ್ರದ ನಂತರ ನಟ-ನಿರ್ದೇಶಕ ಅರವಿಂದ್ ಕೌಶಿಕ್ ಸದ್ದಿಲ್ಲದೆ ಒಂದು ಚಿತ್ರ ಮಾಡಿ ಮುಗಿಸಿದ್ದಾರೆ. ಇದುವರೆಗೂ ಬೇರೆಬೇರೆ ಜಾನರ್‌ಗಳ ಚಿತ್ರ ಮಾಡಿದ್ದ ಅವರು, ಇದೇ ಮೊದಲ ಬಾರಿಗೆ ಒಂದು ಗ್ಯಾಂಗ್‌ಸ್ಟರ್ ಕಥೆಯೊಂದನ್ನು ನಿರ್ದೇಶಿಸಿದ್ದಾರೆ. ಅದೇ ಕಂಟ್ರಿ ಮೇಡ್ - ಭಾಗ 2. ಈಗಾಗಲೇ ಚಿತ್ರದ ಚಿತ್ರೀಕರಣ ಮುಗಿದಿದ್ದು, ಚಿತ್ರ ಸದ್ಯ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಈ ಮಧ್ಯೆ, ಚಿತ್ರದ ಟೀಸರ್ ಬಿಡುಗಡೆ ಮಾಡಿದ್ದಾರೆ ಅರವಿಂದ್.

ಕಂಟ್ರಿ ಮೇಡ್ - ಭಾಗ 2 ಚಿತ್ರದ ಟೀಸರ್ ಬಿಡುಗಡೆ ಸೋಮವಾರ ಸಂಜೆ ಉತ್ಸವ್ ಲೆಗಸಿಯಲ್ಲಿ ಅದ್ದೂರಿಯಾಗಿ ನಡೆಯಿತು. ಟೀಸರ್ ಬಿಡುಗಡೆ ಮಾಡಿ, ಚಿತ್ರದಲ್ಲಿ ನಟಿಸಿರುವ ಹಲವು ಕಲಾವಿದರನ್ನು ಅರವಿಂದ್ ಪರಿಚಯಿಸಿದರು. ಎಲ್ಲರೂ ಚಿತ್ರದಲ್ಲಿ ನಟಿಸಿದ ತಮ್ಮ ಅನುಭವಗಳನ್ನು ಹಂಚಿಕೊಂಡ ನಂತರ, ಈ ಚಿತ್ರ ರೂಪುಗೊಂಡಿದ್ದು ಹೇಗೆ ಎಂದು ಅರವಿಂದ್ ವಿವರಿಸಿದರು.

ನನ್ನ ಹಿಂದಿನ ಸಿನಿಮಾ ಬಿಡುಗಡೆಯಾದ ಮೇಲೆ ಒಂದು ದಿನ ಪಾವಗಡದ ಕಡೆ ಹೋದೆ. ಬಾಲ್ಯದಿಂದಲೂ ನನಗೆ ಬಹಳ ಕಾಡಿದಂತಹ ಊರು ಅದು. ಅಲ್ಲೇನಾದರೂ ಶೂಟಿಂಗ್ ಮಾಡಬೇಕೆಂದು ಆಸೆ ಇತ್ತು. ಆ ಊರಿನಲ್ಲಿ ನಾನು ನೋಡಿದ ಒಂದಿಷ್ಟು ನಿಜ ಜೀವನದ ವ್ಯಕ್ತಿಗಳನ್ನು ಆಧರಿಸಿ ಪಾತ್ರಗಳನ್ನು ಸೃಷ್ಟಿಸಿದೆ. ಹಾಗೆ ಹುಟ್ಟಿಕೊಂಡಿದ್ದೇ ಕಾಜಲ್, ಮಿಲ್ಕಿ, ಮಜಿಜ್ಗೆ, ಬಾಂಬೆ ಬಂಟಿ, ಪಾಯ್ಸನ್ ರವಿ, ಜೋಕರ್ ಜಾನಿ, ಜಿಮ್ ಚೇತು, ಪುಷ್ಪ, ಆ್ಯಂಕರ್ ಅಂಜಲಿ, ರೀಲ್ ಶಾಂತಮ್ಮ, ಡೇರ್ ಡೆವಿಲ್ ಸರೋಜ ಮುಂತಾದ ಪಾತ್ರಗಳು. ಆ ಪಾತ್ರಗಳಿಂದ ಹುಟ್ಟಿಕೊಂಡ ಕಥೆಯೇ ಕಂಟ್ರಿ ಮೇಡ್ - ಭಾಗ 2 ಎಂದರು.




ನಮ್ಮೂರಲ್ಲಿ ನೊಣಗಳು ಜಾಸ್ತಿ, ಏಕೆಂದರೆ ನಮ್ಮೂರಲ್ಲಿ ಹೆಣಗಳು ಜಾಸ್ತಿ ... ಎಂಬ ಒಂದೆಳೆ ಇಟ್ಟುಕೊಂಡು ಈ ಚಿತ್ರದ ಕಥೆ ಬರೆದೆ ಎನ್ನುವ ಅರವಿಂದ್, ದ್ವೇಷ, ರೋಷ, ಸಿಟ್ಟು, ಸೇಡಿನ ಯುದ್ಧಗಳನ್ನು ಹೆಚ್ಚಾಗಿ ಗಂಡಸರು ಮಾಡಿದರೂ, ಗಾಯಗಳಾಗೋದು ಮನೆಯಲ್ಲಿರುವ ಹೆಂಗಸರಿಗೆ. ಹೊಸಿಲು ದಾಟಿ ಗಂಡಸ್ತನ ಮೆರೆದು ಚಾಕು ಇರಿಯುವ ಗಂಡಸರಿಗೆ, ಮನೆಯಲ್ಲಿನ ಹೆಂಗಸರ ನೆನಪು ಬರುವುದಿಲ್ಲ.

ಈ ಅಂಶವನ್ನಿಟ್ಟುಕೊಂಡು ಕಥೆ ಮಾಡಿದ್ದೇನೆ. ಈ ಚಿತ್ರದಲ್ಲಿ ನಾಯಕ, ನಾಯಕಿ, ಕಾಮಿಡಿಯನ್ ಯಾರೂ ಇಲ್ಲ. ಎಲ್ಲಾ ಪಾತ್ರಗಳಿಗೂ ಪ್ರಾಮುಖ್ಯತೆ ಇದೆ ಎಂದರು.

ಕಂಟ್ರಿ ಮೇಡ್ - ಭಾಗ 2 ಚಿತ್ರದಲ್ಲಿ ಅರವಿಂದ್ ಕೌಶಿಕ್, ಅಭಿಲಾಷ್ ದ್ವಾರಕೀಶ್, ರಾಘವ್ ರಾಮ್, ಶಿಲ್ಪಾ ಅರವಿಂದ್, ಪ್ರದೀಪ್ ರೋಶನ್, ಗೌರವ್ ಆರ್ಯನ್, ಕುಲದೀಪ್, ಅಶ್ವಿತಾ ಗೌಡ, ಸುಜಿತ್ ಶೆಟ್ಟಿ, ಸುಧಾ ಪ್ರಸನ್ನ, ಅಪೂರ್ವಶ್ರೀ, ವೀರೇನ್ ಸಾಗರ್ ಮುಂತಾದವರು ನಟಿಸಿದ್ದು, ಉಮೇಶ್ ಮಠಪತಿ, ಸೂರ್ಯ, ಅರವಿಂದ್ ಕೌಶಿಕ್ ಮತ್ತು ಚಂದನ್ ಗೌಡ ನಿರ್ಮಿಸಿದ್ದಾರೆ. ಚಿತ್ರಕ್ಕೆ ಅರ್ಜುನ್ ರಾಮು ಸಂಗೀತ, ಸೂರ್ಯ ಛಾಯಾಗ್ರಹಣ, ಅಲ್ಟಿಮೇಟ್ ಶಿವು ಸಾಹಸ ನಿರ್ದೇಶನವಿದೆ.

## ಪೆದ್ದಿ ಯಿಂದ ಜೈಲರ್ 2 ಕ್ಯಾನ್ಸರ್ ಗೆದ್ದ ಶಿವಣ್ಣ ಫುಲ್ ಬ್ಯುಸಿ..



# ಮುಂದಿನ 6 ತಿಂಗಳು ಇವ್ರದ್ದೇ!



ಸೆಂಚುರಿ ಸ್ಟಾರ್ ಶಿವರಾಜ್ ಕುಮಾರ್ ಎನರ್ಜಿಗೆ ಮ್ಯಾಚ್ ಮಾಡೋಕೆ ಯಾರಿಗೆ ಸಾಧ್ಯ? ಈ ಪ್ರಶ್ನೆಗೆ ಮತ್ತೊಮ್ಮೆ ಉತ್ತರ ಸಿಕ್ಕಿದೆ. ಕನ್ನಡ ಸೂಪರ್‌ಸ್ಟಾರ್‌ಗಳು ವರ್ಷಕ್ಕೊಂದು, ಎರಡು ವರ್ಷಕ್ಕೊಂದು, ಮೂರು ವರ್ಷಕ್ಕೊಂದು ಅಂತ ಸಿನಿಮಾ ಮಾಡುವಾಗ ಶಿವಣ್ಣ ಮಾತ್ರ ನನಗೂ ಅದಕ್ಕೂ ಅಸಂಬಂಧವೇ ಇಲ್ಲ ಅನ್ನೋ ರೀತಿ ಕೆಲಸ ಮಾಡುತ್ತಿದ್ದಾರೆ.

ಶಿವಣ್ಣ ಎನರ್ಜಿ ಬಗ್ಗೆ ಇಡೀ ಇಂಡಸ್ಟ್ರೀಗೆ ಗೊತ್ತು. ಈ ಹಿಂದೆನೂ ಕೂಡ ವರ್ಷಕ್ಕೆ ಕಮ್ಮಿ ಅಂದರೂ ಎರಡರಿಂದ ಮೂರು ಸಿನಿಮಾಗಳು ರಿಲೀಸ್ ಆಗುತ್ತಿದ್ದವು. ಆದರೆ, ಶಿವಣ್ಣ ಕ್ಯಾನ್ಸರ್‌ನಿಂದ ಬಳಲುತ್ತಿದ್ದಾಗ ಅವರ ಅಭಿಮಾನಿಗಳಿಗಿಂತ ಚಿತ್ರರಂಗಕ್ಕೆ ಆಘಾತ ಆಗಿತ್ತು. ಶಿವಣ್ಣ ಕ್ಯಾನ್ಸರ್‌ನಿಂದ ಗುಣಮುಖರಾಗಿ ಬರುತ್ತಾರೆಂಬ ನಂಬಿಕೆ ಇತ್ತು. ಹೀಗಾಗಿ ಅವರಿಗೆ ಆತಂಕ ಕಾಡಿದ್ದು, ಮುಂದು ಸಿನಿಮಾ ಮಾಡುವುದನ್ನು ಕಮ್ಮಿ ಮಾಡಿದರೆ ಏನು ಗತಿ? ಅನ್ನೋ ಪ್ರಶ್ನೆ ಅಂತೂ ಎದ್ದಿತ್ತು.

ಅದಕ್ಕೆ ಶಿವಣ್ಣ ಈ ವರ್ಷ ಉತ್ತರ ಕೊಟ್ಟಿದ್ದಾರೆ. 2026 ಸೆಕೆಂಡ್‌ವರೆಗೂ ಒಂದೇ ಒಂದು ಸಿನಿಮಾ ಕೂಡ ರಿಲೀಸ್ ಆಗಿಲ್ಲ. ಆದರೆ, ಸೆಕೆಂಡ್ ಹಾಫ್‌ನಲ್ಲಿ ಬರೋಬ್ಬರು ಐದು ಸಿನಿಮಾಗಳು ರಿಲೀಸ್‌ಗೆ ತುದಿಗಾಲಲ್ಲಿ ನಿಂತಿವೆ. ಜೂನ್ ತಿಂಗಳಿನಿಂದ ಡಿಸೆಂಬರ್‌ವರೆಗೂ ಬರೋಬ್ಬರಿ 5 ಸಿನಿಮಾಗಳು ರಿಲೀಸ್ ಆಗುತ್ತಿವೆ. ಪೆದ್ದಿಯಿಂದ ಶುರುವಾದರೆ ಡ್ಯಾಡ್‌ವರೆಗೂ ರಿಲೀಸ್ ಆಗಲಿವೆ. ಹಾಗಿದ್ದರೆ, ಆ ಐದು ಸಿನಿಮಾಗಳು ಯಾವುವು? ಯಾವ್ಯಾವಾಗ ರಿಲೀಸ್ ಆಗುತ್ತೆ? ತಿಳಿಯುವುದಕ್ಕೆ ಮುಂದೆ ಓದಿ.

ರಾಮ್ ಚರಣ್-ಪೆದ್ದಿ ತೆಲುಗಿನ ಮೆಗಾ ಪವರ್‌ಸ್ಟಾರ್ ರಾಮ್ ಚರಣ್ ನಟಿಸುತ್ತಿರುವ ಪೆದ್ದಿ ರಿಲೀಸ್‌ಗೆ ರೆಡಿಯಾಗಿದೆ. ಈಗಾಗಲೇ ಸಿನಿಮಾ ತಂಡ ಪ್ರಚಾರವನ್ನು ಆರಂಭಿಸಿದೆ. ಈ ಸಿನಿಮಾದಲ್ಲಿ ಶಿವಣ್ಣ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಶಿವಣ್ಣ ಪಾತ್ರ, ಲುಕ್, ಗೆಟಪ್ ಎಲ್ಲವೂ ರಿವೀಲ್ ಆಗಿದ್ದು ಈ ಸಿನಿಮಾ ಜೂನ್ 5 ರಂದು ವಿಶ್ವದಾದ್ಯಂತ ರಿಲೀಸ್ ಆಗುತ್ತಿದೆ. ಈ ಸಿನಿಮಾ ಕನ್ನಡದಲ್ಲೂ ರಿಲೀಸ್ ಆಗುತ್ತಿರೋದು ವಿಶೇಷ.

ಜೈಲರ್ 2 ಶಿವಣ್ಣನ ಕರಿಯರ್‌ಗೆ ಜೈಲರ್ ಹೊಸ ಇಮೇಜ್ ಕೊಟ್ಟಿತ್ತು. ಶಿವಣ್ಣ ಎಂಟ್ರಿ, ಲುಕ್, ಖದರ್ ನೋಡಿ ತಮಿಳಿಗರೇ ಶಿಳ್ಳೆ ಹೊಡೆದಿದ್ದರು. ಈ ಬೆನ್ನಲ್ಲೇ ಜೈಲರ್ 2 ರಿಲೀಸ್ ನಿರೀಕ್ಷೆಗಳನ್ನು ಹುಟ್ಟಾಕಿದೆ. ಮತ್ತೆ ಶಿವಣ್ಣನ ಖದರ್ ನೋಡುವುದಕ್ಕೆ ಕಾದು ಕೂತಿದ್ದಾರೆ. ಸದ್ಯ ಈ ಸಿನಿಮಾ ಪೋಸ್ಟ್‌ಪ್ರೊಡಕ್ಷನ್ ಹಂತದಲ್ಲಿದೆ. ಆಗಸ್ಟ್‌ಗೆ ರಿಲೀಸ್ ಆಗಬೇಕಿದ್ದ ಸಿನಿಮಾವನ್ನು ಸೆಪ್ಟೆಂಬರ್ 4 ರಂದು ರಿಲೀಸ್ ಮಾಡುವ ಸಾಧ್ಯತೆಯಿದೆ ಎಂದು ಸಿನಿ ಉಳಗಂ ವರದಿ ಮಾಡಿದೆ.

ಬೇಲ್ ಶಿವರಾಜ್‌ಕುಮಾರ್ ಹಾಗೂ ಪವನ್ ಒಡೆಯರ್ ಕಾಂಬಿನೇಷನ್‌ನ ಮೊದಲ ಸಿನಿಮಾ ಬೇಲ್ ಕೂಡ ಇದೇ ವರ್ಷ ರಿಲೀಸ್ ಆಗಲಿದೆ. ಈ ಸಿನಿಮಾದಲ್ಲೂ ಶಿವಣ್ಣ ಲುಕ್ ಗಮನ ಸೆಳೆಯುತ್ತಿದೆ. ಪವನ್ ಒಡೆಯರ್ ನಿರ್ದೇಶನವಿರೋ ಸಿನಿಮಾ ವರಮಹಾಲಕ್ಷ್ಮಿ ಹಬ್ಬಕ್ಕೆ ರಿಲೀಸ್ ಆಗಬಹುದೆಂಬ ನಿರೀಕ್ಷೆಯಿದೆ. 666 ಆಪರೇಷನ್ ಡ್ರೀಮ್ ಥಿಯೇಟರ್ ಹೇಮಂತ್ ಎಂ ರಾವ್ ನಿರ್ದೇಶನದ 666 ಆಪರೇಷನ್ ಡ್ರೀಮ್ ಥೀಯೇಟರ್ ಸಿನಿಮಾ ಇದೇ ವರ್ಷ ರಿಲೀಸ್ ಆಗಲಿದೆ ಅನ್ನೋ ಸುದ್ದಿ ಓಡಾಡುತ್ತಿದೆ. ಶಿವರಾಜ್ ಕುಮಾರ್, ಡಾಲಿ ಧನಂಜಯ್ ಪ್ರಮುಖ ಪಾತ್ರದಲ್ಲಿ ನಟಿಸುತ್ತಿರುವ ಈ ಸಿನಿಮಾ ಬಿಗ್ ರಿಲೀಸ್ ಆಗಲಿದೆ.

ಡ್ಯಾಡ್ ಈ ವರ್ಷ ರಿಲೀಸ್ ಆಗುತ್ತಿರುವ ಶಿವಣ್ಣನ ಮತ್ತೊಂದು ಸಿನಿಮಾ ಡ್ಯಾಡ್. ಅನಿಲ್ ಕನ್ನೆಗಂಟಿ ನಿರ್ದೇಶನದ ಈ ಸಿನಿಮಾವನ್ನು ಮೈರಾ ಕ್ರಿಯೇಷನ್ ನಿರ್ಮಾಣ ಮಾಡುತ್ತಿದ್ದಾರೆ. ತಂದೆ-ಮಗಳ ಬಾಂಧವ್ಯದ ಈ ಸಿನಿಮಾ ಕೂಡ ಇದೇ ವರ್ಷ ರಿಲೀಸ್ ಆಗುತ್ತಿದೆ ಎಂದು ಸ್ಯಾಂಡಲ್‌ವುಡ್‌ನಲ್ಲಿ ಟಾಕ್ ಶುರುವಾಗಿದೆ.

# ಹೊರ್ಮುಜ್ ಜಲಸಂಧಿ ಮೇಲೆ ಇರಾನ್ ಬಿಗಿ ಹಿಡಿತ

## ಮೇಲ್ವಿಚಾರಣಾ ಗಡಿ ಗುರುತಿಸುವಿಕೆ | ಶಾಂತಿ ಮಾತುಕತೆ ನಡುವೆ ಮಹತ್ವದ ಬೆಳವಣಿಗೆ

• ಪ್ರಜೋದಯ ವರದಿ



**ಟೆಹ್ರಾನ್:** ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ನಿರಂತರ ಮಿಲಿಟರಿ ದಾಳಿ ಬೆದರಿಕೆಗಳ ನಡುವೆ ಇರಾನ್ ಹೊರ್ಮುಜ್ ಮೇಲೆ ಮತ್ತಷ್ಟು ಹಿಡಿತ ಸಾಧಿಸಲು ಹೊಸದಾಗಿ ರಚಿಸಲಾದ ಪರ್ಷಿಯನ್ ಗಲ್ಫ್ ಜಲಸಂಧಿ ಪ್ರಾಧಿಕಾರ (ಪಿಜಿಎಸ್‌ಎ) ಜಲಸಂಧಿ ನಿರ್ವಹಣಾ ಮೇಲ್ವಿಚಾರಣಾ ಪ್ರದೇಶದ ಗಡಿಗಳನ್ನು ಗುರುತಿಸಿದೆ.

ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಪಿಜಿಎಸ್‌ಎ ಮೇಲ್ವಿಚಾರಣಾ ಪ್ರದೇಶವು ಇರಾನ್‌ನ ಕುಹ್ ಮೊಬಾರಕ್ ಮತ್ತು ಹೊರ್ಮುಜ್ ಜಲಸಂಧಿಯ ಪೂರ್ವದಲ್ಲಿರುವ ಯುಎಇಯ ಫುಜೈರಾದ ದಕ್ಷಿಣವನ್ನು ಸಂಪರ್ಕಿಸುವ ರೇಖೆಯಿಂದ ಪ್ರಾರಂಭವಾಗುತ್ತದೆ ಮತ್ತು ಇರಾನ್‌ನ ಕೆಶ್ಮ್ ದ್ವೀಪದ ಅಂತ್ಯ ಹಾಗು ಹೊರ್ಮುಜ್ ಜಲಸಂಧಿಯ ಪಶ್ಚಿಮದಲ್ಲಿರುವ ಯುಎಇಯ ಉಮ್ ಅಲ್-ಕ್ವೈವೈನ್ ಅನ್ನು ಸಂಪರ್ಕಿಸುವ ರೇಖೆಯವರೆಗೆ ಇದೆ ಎಂದು ಹೇಳಿದೆ.

ನಿರ್ವಹಣಾ ಸಂಸ್ಥೆಯು, ಹೊರ್ಮುಜ್ ಜಲಸಂಧಿಯ ಮೂಲಕ ಹಾದುಹೋಗಲು ಈ ವ್ಯಾಪ್ತಿಯಲ್ಲಿ ಆಗಾಗ ಪರ್ಷಿಯನ್ ಗಲ್ಫ್ ಜಲಮಾರ್ಗ ನಿರ್ವಹಣೆಯೊಂದಿಗೆ ಸಮನ್ವಯತೆ ಮತ್ತು ಈ ಘಟಕದಿಂದ ಅನುಮತಿ ಅಗತ್ಯವಿರುತ್ತದೆಯೆಂದು ಹೇಳಿದೆ.

ಅಮೇರಿಕಾ ಹಾಗು ಇರಾನ್ ಶಾಂತಿ ಮಾತುಕತೆಗಳ ಬಿಕ್ಕಟ್ಟು ಮುಂದುವರಿದಿರುವುದರ ಮಧ್ಯೆ ಈ ಬೆಳವಣಿಗೆ ನಡೆದಿದ್ದು ಮಹತ್ವ ಪಡೆದುಕೊಂಡಿದೆ. ವಾಷಿಂಗ್ಟನ್ ಡಿಸಿ, ಇರಾನ್‌ನ ಪರಮಾಣು ಕಾರ್ಯಕ್ರಮವನ್ನು ಸಂಪೂರ್ಣವಾಗಿ ನಿಷೇಧಿಸುವಂತೆ ಒತ್ತಾಯಿಸಿದೆ. ಆದರೆ ಟೆಹ್ರಾನ್ ತನ್ನ ಇಂಧನ ಭದ್ರತೆಯನ್ನು ಹಿಡಿದಿಟ್ಟುಕೊಳ್ಳುವುದನ್ನು ಮುಂದುವರೆಸಿದೆ ಮತ್ತು ಹೊರ್ಮುಜ್ ಜಲಸಂಧಿಯ ನಿಯಂತ್ರಣವನ್ನು ಕೋರುತ್ತಿದೆ.

**ಟ್ರಂಪ್-ನೆತನ್ಯಾಹು ಮಧ್ಯೆ ಭಿನ್ನಾಭಿಪ್ರಾಯ**

ಇರಾನ್ ವಿರುದ್ಧದ ಯುದ್ಧಕ್ಕೆ ಸಂಬಂಧಿಸಿ ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ದೂರವಾಣಿ ಮೂಲಕ ಮಾತುಕತೆ ನಡೆಸಿದ್ದು, ಭಿನ್ನಾಭಿಪ್ರಾಯ ಏರ್ಪಟ್ಟಿದೆ ಎಂದು ತಿಳಿದುಬಂದಿದೆ.

ಟ್ರಂಪ್ ಜೊತೆಗಿನ ಮಾತುಕತೆ ಬಳಿಕ, ನೆತನ್ಯಾಹು ಅವರಿಗೆ ತಲೆಬಿಸಿಯಾಗಿದೆ ಎಂದು ಸುದ್ದಿ ಸಂಸ್ಥೆಯೊಂದು ವರದಿ ಮಾಡಿದೆ. ಇರಾನ್‌ನ ಮಿಲಿಟರಿ ಮೂಲಸೌಕರ್ಯಗಳನ್ನು ಗುರಿಯಾಗಿಸಿ ನಿರ್ಣಾಯಕ ದಾಳಿ ನಡೆಸುವ ಮೂಲಕ ಸೇನಾ ಸಾಮರ್ಥ್ಯವನ್ನು ಕುಗ್ಗಿಸಿ, ಅಲ್ಲಿನ ಆಡಳಿತವನ್ನು ದುರ್ಬಲಗೊಳಿಸ ಬೇಕೆಂಬುದು ನೆತನ್ಯಾಹು ಉದ್ದೇಶ. ಆದರೆ, ದಾಳಿಯನ್ನು ಪುನರಾರಂಭಿಸುವ ಬದಲು, ಒಪ್ಪಂದ ಮಾಡಿಕೊಳ್ಳಲು ಟ್ರಂಪ್ ಮುಂದಾಗಿದ್ದಾರೆ. ಇದು, ಅಸಮಾಧಾನಕ್ಕೆ ಕಾರಣವಾಗಿದೆ ಎನ್ನಲಾಗಿದೆ.

ಕತಾರ್ ಮತ್ತು ಯುಎಇ ಸೇರಿ ಇತರ ಅರಬ್ ರಾಷ್ಟ್ರಗಳ ಮನವಿಯ ಮೇರೆಗೆ ಇರಾನ್ ಮೇಲೆ ಮಂಗಳವಾರ ನಡೆಸಲು ಉದ್ದೇಶಿಸಿದ್ದ ದಾಳಿಯನ್ನು ಮುಂದೂಡಲು ಯೋಜಿಸಿರುವುದಾಗಿ ಟ್ರಂಪ್ ಭಾನುವಾರ ತಿಳಿಸಿದ್ದರು.

ಇರಾನ್ ಜೊತೆಗೆ ಒಪ್ಪಂದ ಮಾಡಿಕೊಳ್ಳಲು ಸಿದ್ಧವಿರುವುದಾಗಿ ಪದೇ ಪದೇ ಹೇಳುತ್ತಿರುವ ಟ್ರಂಪ್, ಒಪ್ಪಂದ ಸಾಧ್ಯವಾಗದಿದ್ದರೆ ದಾಳಿ ನಡೆಸುವುದಾಗಿ ತಿಳಿಸಿದ್ದಾರೆ. ಇರಾನ್ ವಿರುದ್ಧದ ಯುದ್ಧವನ್ನು ಕೊನೆಗೊಳಿಸಲು ಯಾವುದೇ ಆತುರವಿಲ್ಲ. ಸಂಘರ್ಷವನ್ನು ಅಂತ್ಯಗೊಳಿಸಲು ಗಡುವು ನಿಗದಿಪಡಿಸುವುದಕ್ಕಿಂತ ಕಾರ್ಯಾಚರಣೆಯ ಉದ್ದೇಶಗಳನ್ನು ಸಾಧಿಸುವುದೇ ಮುಖ್ಯ. ಅವರು ಒಪ್ಪಂದಕ್ಕೆ ಸಹಿ ಹಾಕುವುದು ಅತಿ ಮುಖ್ಯವೆಂದು ಟ್ರಂಪ್ ಬುಧವಾರ ಹೇಳಿದ್ದಾರೆ.

ಇರಾನ್ ಜೊತೆಗಿನ ಒಪ್ಪಂದವು ಅಂತಿಮ ಹಂತದಲ್ಲಿದೆ ಎಂದಿದ್ದ ಅವರು, ಒಂದು ವೇಳೆ ಇರಾನ್ ಇದಕ್ಕೆ ಒಪ್ಪದಿದ್ದರೆ ಮತ್ತೆ ದಾಳಿ ಮಾಡುವುದಾಗಿ ಎಚ್ಚರಿಸಿದ್ದಾರೆ. ಅಂತರಿಕ ಹಾಗು ಇಸ್ರೇಲ್ ಪಡೆಗಳು ಇರಾನ್ ಮೇಲೆ ಫೆಬ್ರುವರಿ 28ರಂದು ಜಂಟಿ ದಾಳಿ ನಡೆಸಿದ್ದವು. ಅಮೇರಿಕಾ ಹಾಗು ಇಸ್ರೇಲ್ ವಿರುದ್ಧ ಮಾತ್ರವಲ್ಲದೆ, ಅವುಗಳ ಮಿತ್ರರಾಷ್ಟ್ರಗಳ ವಿರುದ್ಧವೂ ಇರಾನ್ ಪ್ರತಿದಾಳಿ ನಡೆಸಿದ್ದರಿಂದ, ಪಶ್ಚಿಮ ಏಷ್ಯಾದಾದ್ಯಂತ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ.

ಯುಎಇ, ಕತಾರ್ ಸೇರಿ ಅರಬ್ ರಾಷ್ಟ್ರಗಳು ಮಾಡಿದ ಮನವಿಯಂತೆ ಇರಾನ್ ಮೇಲಿನ ದಾಳಿಯನ್ನು ನಿಲ್ಲಿಸಲಾಗಿದೆ.

## ಕೃಷಿಯಲ್ಲಿ ರೈತರು ಸ್ವಾವಲಂಬಿಗಳಾಗಬೇಕು

» ಮೊದಲನೇ ಪುಟದಿಂದ

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ಡಾ.ಎಂ.ಸಿ.ರಂಗಸ್ವಾಮಿ ಅವರು ಮಾತನಾಡಿ, ದೇಶಾದ್ಯಂತ ಗೊಬ್ಬರದ ಸಮಸ್ಯೆ ಹೆಚ್ಚುತ್ತಿರುವ ಹಿನ್ನಲೆ ರೈತರು ನೈಸರ್ಗಿಕ ಹಾಗೂ ಸಾವಯವ ಕೃಷಿಯತ್ತ ಹೆಚ್ಚಿನ ಒಲವು ತೋರಬೇಕು. ಜೀವಾಮೃತದಲ್ಲಿ ಅಪಾರ ಪ್ರಮಾಣದ ಉಪಕಾರಿ ಜೀವಾಣುಗಳಿದ್ದು, ಅದನ್ನು ಮಣ್ಣಿಗೆ ಸೇರಿಸುವುದರಿಂದ ಫಲವತ್ತತೆ ಹೆಚ್ಚುತ್ತದೆ. ಕೃಷಿಯಲ್ಲಿ ಹೊರರಾಜ್ಯದ ಕಾರ್ಮಿಕರ ಅವಲಂಬನೆ ಕಡಿಮೆ ಮಾಡಲು ಕೃತಕ ಬುದ್ಧಿಮತ್ತೆ ಹಾಗೂ ರೋಬೋಟಿಕ್ ತಂತ್ರಜ್ಞಾನ ಅಳವಡಿಸಿಕೊಳ್ಳುವ ಅಗತ್ಯವಿದೆ ಎಂದು ಹೇಳಿದರು. ಕೃಷಿ ವಿಜ್ಞಾನ ಕೇಂದ್ರ ಕಂದಲಿ ಕೃಷಿ ಇಂಜಿನೀಯರಿಂಗ್ ವಿಭಾಗದ ಶ್ರೀನಿವಾಸ್ ದೇಶಪಾಂಡೆ ಅವರು ಕೃಷಿಯಲ್ಲಿ ಕೃತಕ ಬುದ್ಧಿ ಮತ್ತೆಯ ಬಳಕೆ ಕುರಿತು ಮಾಹಿತಿ ನೀಡಿದರು.

ಜಂಟಿ ಕೃಷಿ ನಿರ್ದೇಶಕ ಪಿ.ರಮೇಶ್‌ಕುಮಾರ್ ಅವರು ಮಾತನಾಡಿ, ಜಿಲ್ಲೆಯಲ್ಲಿ ಶೇ.30 ರಷ್ಟು ಮಳೆ ಕೊರತೆ ಕಂಡು ಬಂದಿದ್ದು, ಜೂನ್ ತಿಂಗಳಲ್ಲಿ ಉತ್ತಮ ಮಳೆಯಾಗುವ ನಿರೀಕ್ಷೆ ಇದೆ. ಯೂರಿಯಾ ಹಾಗು ಡಿಎಪಿ ಗೊಬ್ಬರಗಳನ್ನು ಸಮತೋಲನವಾಗಿ ಬಳಸುವ ಜೊತೆಗೆ ನ್ಯಾನೋ ಯೂರಿಯಾ ಮತ್ತು ನ್ಯಾನೋ ಡಿಎಪಿ ಬಳಕೆ ಮಾಡಬೇಕು. ಮುಸುಕಿನ ಜೋಳದ 391 ಲಾಟ್ ತಳಿಗಳ ಬೀಜಗಳನ್ನು ಬಿಳಿಸುಳಿ ರೋಗಾಣು ಇಲ್ಲವೆಂದು ಪರೀಕ್ಷಿಸಲಾಗಿದ್ದು, ಮುಂಗಾರು ಹಂಗಾಮಿಗೆ ಅಗತ್ಯ ದಾಸ್ತಾನು ಮಾಡಲಾಗಿದೆ ಎಂದು ಹೇಳಿದರು.

ತೋಟಗಾರಿಕೆ ಜಂಟಿ ನಿರ್ದೇಶಕ ಹೆಚ್.ಆರ್. ಯೋಗೀಶ್, ಉಪ ಕೃಷಿ ನಿರ್ದೇಶಕರಾದ ಎ.ಎಸ್. ಕೋಕಿಲಾ, ಬಿ.ಎನ್.ಪ್ರಭಾಕರ್, ಪಶುಪಾಲನೆ ಇಲಾಖೆ ಉಪ ನಿರ್ದೇಶಕ ಡಾ. ಆರ್.ಕೆ.ರಮೇಶ್, ರೇಷ್ಮೆ ವಿಸ್ತರಣಾಧಿಕಾರಿ ನಿಶ್ಚಿತ, ಸಹಕಾರ ಸಂಘಗಳ ಉಪ ನಿಬಂಧಕ ಕಿರಣ್ ಕುಮಾರ್ ಇದ್ದರು.

## ತಾಳ್ಮೆಯ ಗುಣದಿಂದಲೇ ಕೆ.ಆರ್.ಮಂಜುನಾಥ್ ಚಿರಪರಿಚಿತ

» ಮೊದಲನೇ ಪುಟದಿಂದ

ಜಿಲ್ಲೆಯ ಮೊದಲ ಪತ್ರಿಕೆ ಪ್ರತಿನಿಧಿಯಲ್ಲಿ 26 ವರ್ಷ ಸೇವೆ ಮಾಡಿದ್ದೇವೆ. 1996 ಪ್ರಧಾನ ಕಾರ್ಯದರ್ಶಿಯಾಗಿ, ನಂತರ ಅಧ್ಯಕ್ಷನಾಗಿಯೂ ಕೆಲಸ ಮಾಡಿದ್ದೇನೆ ಎಂದರು.

ಹುದ್ದೆಗೆ ಗೌರವ ಕೊಡಬೇಕು, ಅಂತೆಯೇ ನಾವೇನು ಮಾಡಿದ್ದೇವೆಂದು ಹೆಜ್ಜೆ ಗುರುತು ಇರಬೇಕು, ನಾನು ಹಿರಿಯ ಅನ್ನಿಸಿಕೊಳ್ಳುವುದಕ್ಕಿಂತಲೂ ಕಿರಿಯನಾಗಿಯೇ ಇರುವಾಸೆ. ಅಚ್ಚು ಮೊಳೆ ಜೋಡಿಸುವ ಕಾಲದಲ್ಲಿ ಪತ್ರಿಕೋದ್ಯಮ ಆರಂಭಿಸಿದ ನಾನು ಹಂತ ಹಂತವಾಗಿ ಇಲ್ಲಿಯವರೆಗೆ ಬಂದಿದ್ದೇವೆ. ಈ ಹಂತದವರೆಗೂ ಬರುತ್ತೇನೆಂದು ಅಂದುಕೊಂಡಿರಲಿಲ್ಲ, ಹಿಂದೆ ಕಷ್ಟದಲ್ಲಿ ಬೆಳೆದು ಬಂದಿದ್ದೇವೆಂದು ತಾವು ನಡೆದು ಬಂದ ಹಾದಿ ನೆನಪಿಸಿಕೊಂಡ ಅವರು, ಕಷ್ಟದ ಹಾದಿ ಸವೆಸಿದ್ದಕ್ಕೆ ಈಗ ಗೌರವ ಸಿಕ್ಕಿದೆ ಎಂದರು.

ಸಂಘದ ಮಾಜಿ ಅಧ್ಯಕ್ಷ ರವಿನಾಕಲಗೂಡು ಅವರು ಮಾತನಾಡಿ, ಸಂಘದಲ್ಲಿ ಕ್ರೀಡಾಕೂಟಕ್ಕೆ ಚಾಲನೆ ನೀಡಿದ್ದು ಮಂಜಣ್ಣ. ಆ ಪರಂಪರೆ ಇಲ್ಲಿಯವರೆಗೂ ಮುಂದುವರಿದು ಕೊಂಡು ಬಂದಿದೆ. ಸಂಘಕ್ಕೆ ಸಾಕಷ್ಟು ಕೊಡುಗೆ ನೀಡಿದ್ದಾರೆಂದು ಸ್ಮರಿಸಿದರು.

ಮತ್ತೊಬ್ಬ ಮಾಜಿ ಅಧ್ಯಕ್ಷ ಬಿ.ಆರ್.ಉದಯಕುಮಾರ್ ಮಾತನಾಡಿ, ಮಂಜಣ್ಣ ಅವರೊಬ್ಬ ಅಜಾತಶತ್ರು, ಹೃದಯವಂತ, ಎಲ್ಲರನ್ನೂ ಪ್ರೀತಿಸುವ ಗುಣ ಅವರಲ್ಲಿದೆ. ಅವರದು ವಿಶೇಷ ನಡವಳಿಕೆ, ಸಂಘಕ್ಕೆ ಬಹಳ ಕೊಡುಗೆ ನೀಡಿದ್ದಾರೆ. ಅವರಿಗೆ ವಿಧಾನ ಪರಿಷತ್ ಸದಸ್ಯರಾಗುವ ಅರ್ಹತೆ ಇದೆ ಎಂದರು.

ಉಪಾಧ್ಯಕ್ಷ ಎನ್.ನಂಜುಂಡೇಗೌಡ ಅವರು ಮಾತನಾಡಿ, ಮಂಜುನಾಥ್ ಅವರು ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಸೇರಿ ಹಲವು ಗೌರವ ಸಂದಿವೆ. ಅವರ ನಡವಳಿಕೆ ವಿಶೇಷವಾದುದು. ಹಲವು ಹುದ್ದೆಗಳಲ್ಲಿ ಕೆಲಸ ಮಾಡಿದ್ದರೂ ಅವರು ಎಂದೂ ಮುನಿಸಿಕೊಂಡವರಲ್ಲ. ಅವರೊಂದಿಗಿನ ಗೆಳೆತನ ಸ್ನೇಹ, ಸಂಬಂಧಕ್ಕೆ ಮೀರಿದ್ದು ಎಂದು ನೆನಪಿಸಿಕೊಂಡರು.

ಮಾಜಿ ಅಧ್ಯಕ್ಷ ಅತೀಖುರ್ ರೆಹಮಾನ್, ಹಿರಿಯ ಪತ್ರಕರ್ತ ಉದಯರವಿ ಮಾತನಾಡಿದರು. ಉಪಾಧ್ಯಕ್ಷ ಪ್ರಕಾಶ್ ಜಿ, ಪ್ರಧಾನ ಕಾರ್ಯದರ್ಶಿ ಕೆ.ಜಿ.ಸುರೇಶ್, ಕಾರ್ಯದರ್ಶಿ ಕೆ.ಎಂ.ಹರೀಶ್, ಖಜಾಂಚಿ ಪ್ರಕಾಶ್ ಬೆಳವಾಡಿ ಮತ್ತಿತರರು ಹಾಜರಿದ್ದರು.

## ಬೆಸ್ತರ ಬೀದಿಯಲ್ಲಿ ಯುಜಿಡಿ ಸಮಸ್ಯೆ



• ಪ್ರಜೋದಯ ವರದಿ

**ಹಾಸನ:** ನಗರದ 28ನೇ ವಾರ್ಡ್‌ನ ವಲ್ಲಭಾಯಿ ರಸ್ತೆ ಸಮೀಪದ ಬೆಸ್ತರ ಬೀದಿ 1ನೇ ಕ್ರಾಸ್‌ನಲ್ಲಿ ಯುಜಿಡಿ ಕೊಳಚೆ ನೀರು ರಸ್ತೆ ಮೇಲೆ ಹರಿಯುತ್ತಿರುವುದರಿಂದ ಸ್ಥಳೀಯ ನಿವಾಸಿಗಳು ಸಂಕಷ್ಟ ಅನುಭವಿಸುತ್ತಿದ್ದಾರೆ.

ಅನೇಕ ಬಾರಿ ಈ ಬಗ್ಗೆ ಮಹಾನಗರ ಪಾಲಿಕೆಗೆ ದೂರು ನೀಡಿದರೂ ಸಮಸ್ಯೆಗೆ ಶಾಶ್ವತ ಪರಿಹಾರ ಸಿಗದಿರುವುದರಿಂದ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಶಾದಿ ಮಹಲ್‌ನಿಂದ ಹೊರಬರುವ ಕೊಳಚೆ ನೀರು ಸಹ ಸರಿಯಾಗಿ ವ್ಯವಸ್ಥೆ ಇಲ್ಲದೆ ಈ ಪ್ರದೇಶದ ಮೂಲಕ ಹರಿಯುತ್ತಿರುವುದರಿಂದ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿದೆ.

ದುರ್ವಾಸನೆಯಿಂದ ಆರೋಗ್ಯ ಸಮಸ್ಯೆ ಹಾಗು ದೈನಂದಿನ ಬದುಕಿಗೆ ತೊಂದರೆ ಉಂಟಾಗಿದೆ. ಮನೆ ಬಾಗಿಲು ತೆರೆದು ಬದುಕುವುದೇ ಕಷ್ಟವಾಗಿದೆ ಎಂದು ನಿವಾಸಿಗಳು ಅಳಲು ತೋಡಿಕೊಂಡಿದ್ದಾರೆ. ಜನಪ್ರತಿನಿಧಿಗಳಿಗೆ ದೂರು ನೀಡಿದರೂ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಆರೋಪಿಸಿರುವ ನಿವಾಸಿಗಳು, ಕೂಡಲೇ ಯುಜಿಡಿ ವ್ಯವಸ್ಥೆ ಸರಿಪಡಿಸದಿದ್ದರೆ ಜಿಲ್ಲಾಧಿಕಾರಿಗಳ ಕಚೇರಿ ಎದುರು ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

## ಖುಷಿ ಶ್ರೀ ಶಾಲೆ ಪರವಾನಗಿ ವಿವಾದ: ಪೋಷಕರಿಂದ ಮನವಿ

• ಪ್ರಜೋದಯ ವರದಿ



**ಹಾಸನ:** ಹೊಳೆನರಸೀಪುರ ತಾಲ್ಲೂಕಿನ ಐಚನಹಳ್ಳಿ ಖುಷಿ ಶ್ರೀ ವಿದ್ಯಾನಿಕೇತನ ವಿದ್ಯಾ ಸಂಸ್ಥೆಯ ಪರವಾನಗಿ ಕುರಿತು ಉಂಟಾಗಿರುವ ಗೊಂದಲ ಬಗೆಹರಿಸಿ ವಿದ್ಯಾರ್ಥಿಗಳ ಕಲಿಕೆಗೆ ಅನುಕೂಲ ಮಾಡಿಕೊಡ ಬೇಕೆಂದು ಪೋಷಕರು ಗುರುವಾರ ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕರಿಗೆ ಮನವಿ ಸಲ್ಲಿಸಿದರು.

ನಾಗರಾಜು ಎಂಬುವವರು ಮಾತನಾಡಿ, ಶಾಲಾ ಕಟ್ಟಡದ ಪರವಾನಗಿ ಅವಧಿ ಮುಗಿದಿದ್ದರೂ ನವೀಕರಣ ಮಾಡಿಕೊಂಡಿಲ್ಲ. ಅದರಿಂದ ಶಾಲೆಯ ಮಾನ್ಯತೆ ರದ್ದಾಗುವ ಆತಂಕ ಕಾಡುತ್ತಿದೆ. ಶಾಲೆಯಲ್ಲಿ 700 ಮಕ್ಕಳು ಓದುತ್ತಿದ್ದು ಅವರ ಭವಿಷ್ಯದ ಬಗ್ಗೆ ಭಾರೀ ಚಿಂತೆಯಾಗಿದೆ ಎಂದರು.

ಶಿಕ್ಷಣ ಮಧ್ಯದಲ್ಲೇ ಸ್ಥಗಿತಗೊಂಡರೆ ವಿದ್ಯಾರ್ಥಿಗಳ ಭವಿಷ್ಯ ಸಂಕಷ್ಟಕ್ಕೆ ಸಿಲುಕಲಿದೆ. ಅಧಿಕಾರಿ ಗಳು ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕು. ಶಾಲಾರಂಭಕ್ಕೆ ಕೆಲವೇ ದಿನಗಳು ಬಾಕಿಯಿದ್ದು ಆದಷ್ಟು ಬೇಗ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕೆಂದು ಆಗ್ರಹಿಸಿದರು.

ಮಂಜುನಾಥ್ ಅವರು ಮಾತನಾಡಿ, ಕೆಲವರ ವೈಯಕ್ತಿಕ ಲಾಭದ ಉದ್ದೇಶದಿಂದ ಶಾಲೆಯ ಕಾರ್ಯಚಟುವಟಿಕೆಗಳಿಗೆ ಅಡ್ಡಿಪಡಿಸುವ ಪ್ರಯತ್ನ ನಡೆಯುತ್ತಿದೆ. ಹಳೆಯ ಕರಾರು ಒಪ್ಪಂದದಂತೆ ಪ್ರಕ್ರಿಯೆ ಪೂರ್ಣಗೊಳ್ಳದೆ ಹೆಚ್ಚಿನ ಹಣದ ಬೇಡಿಕೆ ಇಟ್ಟು ಒತ್ತಡ ಹೇರುವ ಪ್ರಯತ್ನ ನಡೆಯುತ್ತಿದೆ. ಈ ನಡುವೆ ಶಾಲಾ ಮಕ್ಕಳ ಭವಿಷ್ಯವನ್ನು ಸಂಪೂರ್ಣ ನಿರ್ಲಕ್ಷ್ಯ ಮಾಡಲಾ ಗುತ್ತಿದೆ. ವಿಶೇಷವಾಗಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಪರೀಕ್ಷಾ ಸಿದ್ಧತೆ ಹಂತದಲ್ಲಿರುವುದರಿಂದ ಈ ರೀತಿಯ ಅನಿಶ್ಚಿತತೆ ವಿದ್ಯಾರ್ಥಿಗಳು ಹಾಗು ಪೋಷಕರಲ್ಲಿ ಆತಂಕಕ್ಕೆ ಕಾರಣವಾಗಿದೆ ಎಂದರು.

ಶಾಲೆ ಬಂದ್ ಆದರೆ ಮಕ್ಕಳನ್ನು ಬೇರೆ ಶಾಲೆಗೆ ಸೇರಿಸುವುದು, ಹೊಸ ಪರಿಸರಕ್ಕೆ ಹೊಂದಿ ಕೊಳ್ಳುವುದು, ಪರೀಕ್ಷಾ ಸಿದ್ಧತೆ ನಡೆಸುವುದು ಎಲ್ಲವೂ ಕಷ್ಟವಾಗುತ್ತದೆ. ಜಿಲ್ಲಾಡಳಿತ ತಕ್ಷಣ ಮಧ್ಯಪ್ರವೇಶಿಸಿ ಸಮಸ್ಯೆ ಬಗೆಹರಿಸಬೇಕೆಂದು ಆಗ್ರಹಿಸಿದರು.

ಪೋಷಕರಾದ ವಾಸುದೇವ್, ಭಾಸ್ಕರ್, ಲೋಕೇಶ್, ಪವಿತ್ರ, ಇಂದಿರಾ, ಈರಪ್ಪ, ಉಷಾ, ಶೋಭಾ, ಶ್ರೀನಿವಾಸ್, ಹೇಮರಾಜು, ಸವಿತಾ, ಅನಿತಾ, ರೂಪಾ, ಕುಮಾರ್, ಮೋಹನ್, ನಂದಿನಿ, ಆಶಾ, ರಾಜು ಇತರರಿದ್ದರು.

## ಸಂವಿಧಾನವೇ ಸಮಾನತೆ-ಸ್ವಾತಂತ್ರ್ಯದ ಶಕ್ತಿ: ಸಿಮೆಂಟ್ ಮಂಜು

• ಪ್ರಜೋದಯ ವರದಿ



**ಸಕಲೇಶಪುರ:** ದೇಶದ ಪ್ರತಿಯೊಬ್ಬರಿಗೂ ಗೌರವಯುತ ಸ್ಥಾನಮಾನ, ಸಮಾನತೆ ಹಾಗು ಅಭಿವ್ಯಕ್ತಿ ಸ್ವಾತಂತ್ರ್ಯ ದೊರಕಲು ಡಾ.ಬಿ.ಆರ್.ಅಂಬೇಡ್ಕರ್ ಅವರು ರಚಿಸಿದ ಸಂವಿಧಾನ ಕಾರಣವೆಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ತಾಲ್ಲೂಕಿನ ಬಾಳ್ಳುಪೇಟೆಯಲ್ಲಿ ಗುರುವಾರ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಣೆ ಸಮಿತಿ ವತಿಯಿಂದ ಆಯೋಜಿಸಿದ್ದ 135ನೇ ಅಂಬೇಡ್ಕರ್ ಜಯಂತಿ ಭೀಮೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಮಾನ ಅವಕಾಶಗಳು ಸಿಗಬೇಕೆಂಬ ಸಂದೇಶವನ್ನು ಸಂವಿಧಾನ ಸಾರುತ್ತದೆ. ಅಂಬೇಡ್ಕರ್ ರಚಿಸಿದ ಸಂವಿಧಾನದಿಂದ ಮಹಿಳೆಯರಿಗೆ ಸಮಾನ ಹಕ್ಕುಗಳು ದೊರೆತಿದ್ದು, ಸ್ತ್ರೀಯರು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಲು ಸಾಧ್ಯವಾ ಗಿದೆ. ಮಹಿಳೆಯರು ಶಿಕ್ಷಣ ಪಡೆದು ಉನ್ನತ ಹುದ್ದೆಗಳನ್ನು ಅಲಂಕರಿಸುತ್ತಿರುವುದು ಅಂಬೇಡ್ಕರ್ ಅವರ ದೂರದೃಷ್ಟಿಯ ಫಲ ಎಂದು ಹೇಳಿದರು.

ಭಾರತೀಯ ಸಮಾಜದಲ್ಲಿ ಮಹಿಳೆಯರನ್ನು ಸಂಕೋಲೆಗಳಿಂದ ಬಿಡುಗಡೆಗೊಳಿಸಿ ಅವರಿಗೆ ಸ್ವಾತಂತ್ರ್ಯ ಹಾಗು ಸಮಾನತೆಯ ತತ್ವಗಳನ್ನು ಸಂವಿಧಾನಾತ್ಮಕವಾಗಿ ದೊರಕಿಸಿ ಕೊಡುವಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಅವರ ಕೊಡುಗೆಯನ್ನು ಯಾರೂ ಮೀರಿಸಲು ಸಾಧ್ಯವಿಲ್ಲ. ಅವರ ಸೇವೆಯನ್ನು ದೇಶ ಎಂದಿಗೂ ಮರೆಯುವುದಿಲ್ಲವೆಂದರು.

ಅಕ್ಕ ಐಎಎಸ್ ಅಕಾಡೆಮಿ ನಿರ್ದೇಶಕ ಶಿವಕುಮಾರ್ ಅವರು ಮಾತನಾಡಿ, ಅಂಬೇಡ್ಕರ್ ಬಗ್ಗೆ ಅಭಿಮಾನ ಹೆಚ್ಚಾಗಿದೆ. ಅವರ ವಿಚಾರಧಾರೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮನೋಭಾವ ಕಡಿಮೆಯಾಗಿದೆ. ಅವರ ಚಿಂತನೆಗಳನ್ನು ಅರ್ಥ ಮಾಡಿಕೊಂಡು ಅನುಸರಿಸಿ ದಾಗ ಮಾತ್ರ ಜೀವನ ಪರಿಪೂರ್ಣವಾಗುತ್ತದೆಂದರು.

ಅಂಬೇಡ್ಕರ್ ಅವರ ಕನಸು ನನಸಾಗಲಿಲ್ಲ ಎಂದು ಹೇಳುವ ಮೊದಲು ಅವರ ಕನಸು ಏನು ಎಂಬುದನ್ನು ಅರಿಯಬೇಕು. ಸಮಾಜದಲ್ಲಿನ ಸಮಸ್ಯೆಗಳನ್ನು ಬಗೆಹರಿಸಲು ಜ್ಞಾನ ಅತ್ಯಗತ್ಯ. ಪೋಷಕರು ಮಕ್ಕಳ ವಿದ್ಯಾಭ್ಯಾಸಕ್ಕೆ ಪೂರಕ ವಾತಾವರಣ ನಿರ್ಮಿಸಬೇಕು. ಒಂದು ಊರಿನ ಘನತೆ-ಗೌರವ ಹೆಚ್ಚಾಗುವುದು ಆ ಊರಿನಲ್ಲಿ ಎಷ್ಟು ಸಾಧಕರು ರೂಪುಗೊಳ್ಳುತ್ತಾರೆಂಬುದರ ಮೇಲೆ ಅವಲಂಬಿತವಾಗಿದೆ ಎಂದರು.

ಸಂಸದ ಶ್ರೇಯಸ್ ಪಟೇಲ್ ಅವರು ಮಾತನಾಡಿ, ಅಂಬೇಡ್ಕರ್ ಅವರ ಘೋಷವಾಕ್ಯ ಶಿಕ್ಷಿತರಾಗಿ, ಸಂಘಟಿತರಾಗಿ, ಹೋರಾಡಿ ಎಂಬ ಸಂದೇಶ ಇಂದಿಗೂ ಪ್ರಸ್ತುತವಾಗಿದೆ. ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದು ಪೋಷಕರ ಜವಾಬ್ದಾರಿ ಎಂದರು.

ಮಾಜಿ ಶಾಸಕ ಹೆಚ್.ಕೆ.ಕುಮಾರಸ್ವಾಮಿ, ಹಾಸನದ ಮಲೆನಾಡು ಇಂಜಿನೀಯರಿಂಗ್ ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಬಿ.ಆರ್.ಗುರುದೇವ್, ಕರ್ನಾಟಕ ಅಂಬೇಡ್ಕರ್ ಪ್ರಶಸ್ತಿ ಪುರಸ್ಕೃತ ಅಣ್ಣಯ್ಯ ಹೆತ್ತೂರು, ಬಿಎಸ್‌ಪಿ ಜಿಲ್ಲಾಧ್ಯಕ್ಷ ಲಕ್ಷಣ ಕೀರ್ತಿ, ಜಿಲ್ಲಾ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಬಾಳ್ಳು ಗೋಪಾಲ್, ಬಿಜೆಪಿ ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ನೇತ್ರಾವತಿ ಮಂಜುನಾಥ್, ಧರ್ಮ ಗುರು ಸುಲೈಮಾನ್ ಮೊದಲಾದವರಿದ್ದರು.

## ಕೋಣನಕಟ್ಟೆ ಕೆರೆ ಅಭಿವೃದ್ಧಿಗೆ ಕ್ರಮ



• ಪ್ರಜೋದಯ ವರದಿ

**ಆಲೂರು:** ಪಟ್ಟಣದ 4ನೇ ವಾರ್ಡ್‌ನಲ್ಲಿರುವ ಕೋಣನಕಟ್ಟೆ ಕೆರೆ ದುರಸ್ತಿ ಕಾಮಗಾರಿಯನ್ನು ಅತಿ ಶೀಘ್ರದಲ್ಲಿ ಕೈಗೆತ್ತಿಕೊಳ್ಳಲಾಗುವುದೆಂದು ಶಾಸಕ ಸಿಮೆಂಟ್ ಮಂಜು ಅವರು ತಿಳಿಸಿದರು.

ಗುರುವಾರ ಮಧ್ಯಾಹ್ನ ಕೋಣನಕಟ್ಟೆ ಕೆರೆ ವೀಕ್ಷಿಸಿ ಮಾತನಾಡಿದ ಅವರು, ಕೆರೆ ಸುಮಾರು ಒಂದು ಕಾಲು ಎಕರೆ ಪ್ರದೇಶವನ್ನೊಳಗೊಂಡಿದೆ. ಈ ಪ್ರದೇಶದಲ್ಲಿ ಇದೊಂದೆ ಕೆರೆ ಇದೆ. ಕೆರೆಯಲ್ಲಿ ಸಂಪೂರ್ಣ ಹೂಳು ತುಂಬಿದೆ. ಗಿಡ ಗುಂಟೆಗಳು ಬೆಳೆದು ನಿಂತಿರುವುದರಿಂದ ಕಸ ಶೇಖರಣೆಯಾಗುತ್ತಿದೆ. ಮೊದಲು ಸರ್ವೆ ಮಾಡಿ ಕೆರೆಯಂಗಳವನ್ನು ಗುರುತಿಸಲಾಗುವುದು. ನಂತರ ಹೂಳು ತೆಗೆದು ಏರಿ ಪ್ರದೇಶಕ್ಕೆ ಕಲ್ಲಿನಿಂದ ರಿವಿಟ್‌ಮೆಂಟ್ ಮಾಡಿ ಸುಂದರಗೊಳಿಸಲಾಗುವುದು. ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ವಾಯು ವಿಹಾರಕ್ಕೆ ಸೂಕ್ತ ಸ್ಥಳವಿಲ್ಲ. ಕೆರೆ ಅಭಿವೃದ್ಧಿ ಪಡಿಸಿದರೆ ಪಟ್ಟಣ ಸುಂದರವಾಗುವುದಲ್ಲದೆ ವಾಯು ವಿಹಾರಕ್ಕೆ ಅನುಕೂಲವಾಗುತ್ತದೆಂದರು.

ಮುಂದಿನ 2 ತಿಂಗಳಿನಲ್ಲಿ ಕಾಮ ಗಾರಿ ಪ್ರಾರಂಭಿಸಲು ತಯಾರಿ ಮಾಡಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು. ಕಿರು ನೀರಾವರಿ ಇಲಾಖೆ ಅಧಿಕಾರಿಗಳು, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಮಂಜುನಾಥ್ ಹಾಜರಿದ್ದರು.

## ಮಕ್ಕಳಿಗೆ ವಿದ್ಯೆ ಜೊತೆಗೆ ವಿನಯ ಕಲಿಕೆಯಾಗಲಿ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಪದವಿ ಶಿಕ್ಷಣದ ಜೊತೆಯಲ್ಲಿ ಯಾವುದಾದರೂ ಒಂದು ವೃತ್ತಿಯನ್ನು ಕಲಿಯುವುದರಿಂದ ನಿರುದ್ಯೋಗ ಸಮಸ್ಯೆ ನಿವಾರಣೆಯಾಗುತ್ತದೆ. ವಿದ್ಯಾರ್ಥಿಗಳು ಅಂಕ ಗಳಿಕೆಗಾಗಿ ವ್ಯಾಸಂಗ ಮಾಡದೆ ವಿನಯ, ಸಂಸ್ಕಾರ ಹಾಗು ಸದಾಚಾರಗಳನ್ನು ಕಲಿಯಬೇಕೆಂದು ಕನ್ನಡ ಸಾಹಿತ್ಯ ಪರಿಷತ್ ಹೋಬಳಿ ಘಟಕದ ಅಧ್ಯಕ್ಷ ಹೆಚ್.ಎ.ಪ್ರಮೋದ್ ಅವರು ಹೇಳಿದರು.

ತಾಲ್ಲೂಕಿನ ಹಿರೀಸಾವೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅಂತಿಮ ಪದವಿ ವಿದ್ಯಾರ್ಥಿ ಗಳಿಗಾಗಿ ಏರ್ಪಡಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ಅವರು, ದಿನದಿಂದ ದಿನಕ್ಕೆ ತಂತ್ರಜ್ಞಾನದ ಬಳಕೆ ಹೆಚ್ಚುತ್ತಿದೆ. ಅದರಿಂದ ನಿರುದ್ಯೋಗ ಸಮಸ್ಯೆ ಕಾಡುತ್ತಿದೆ. ಕೈಯಲ್ಲಿ ಒಂದು ವೃತ್ತಿ ಇದ್ದು, ಆ ಕೆಲಸವನ್ನು ಏಕಾಗ್ರತೆ, ಶ್ರಮದಿಂದ ಮಾಡಿದಾಗ ಯಶಸ್ಸು ಸಿಗುತ್ತದೆ. ನಿಮ್ಮ ಪೋಷಕರು ಮತ್ತು ಶಿಕ್ಷಣ ಪಡೆದ ಸಂಸ್ಥೆ, ಗುರುಗಳನ್ನು ಗೌರವಿಸಿ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಬಿ.ಹೆಚ್.ಲಕ್ಷ್ಮಣಗೌಡ ಅವರು ಮಾತನಾಡಿ, ಪದವಿ ಮುಗಿಸಿದ ನಂತರ ಜೀವನದ ನಿಜವಾದ ಸವಾಲುಗಳು ಪ್ರಾರಂಭವಾಗುತ್ತದೆ. ಎಲ್ಲಾ ಕ್ಷಣದಲ್ಲಿ ಉತ್ತಮವಾದುದನ್ನು ಯೋಚನೆ ಮಾಡಬೇಕು. ಓದುವುದನ್ನು ನಿಲ್ಲಿಸದೆ, ಉನ್ನತ ಶಿಕ್ಷಣದ ಪದವಿ ಗಳಿಸಿ, ಕಲಿತ ವಿದ್ಯೆಯಿಂದ ಸಮಾಜದಲ್ಲಿ ಮಾನವೀಯ ಮೌಲ್ಯಗಳೊಂದಿಗೆ ಒಳ್ಳೆಯ ವ್ಯಕ್ತಿಯಾಗಿ ಬದುಕಬೇಕೆಂದು ಸಲಹೆ ನೀಡಿದರು.

ಪ್ರೊ.ಎಂ.ಕೆ.ಮಂಜುನಾಥ್ ಅವರು ಮಾತನಾಡಿ, ಪ್ರತಿ ಕ್ಷೇತ್ರವೂ ಸ್ಪರ್ಧಾತ್ಮಕವಾಗಿದೆ. ಪದವಿ ಪರೀಕ್ಷೆಯಲ್ಲಿ ಪಡೆದ ಅಂಕಗಳಿಂದ ಉದ್ಯೋಗ ಸಿಗುವುದು ಕಷ್ಟ. ನಿಮ್ಮಲ್ಲಿರುವ ಬುದ್ದಿವಂತಿಕೆ, ಕೌಶಲ, ಸಾಮಾನ್ಯ ಜ್ಞಾನದಿಂದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಪಡೆದು ಒಳ್ಳೆಯ ಉದ್ಯೋಗ ಗಿಟ್ಟಿಸಿಕೊಳ್ಳಬಹುದು. ಈಗಾಗಲೇ ಲಕ್ಷಾಂತರ ಪದವೀಧರರು ಸರ್ಕಾರದಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವಂತೆ ಪ್ರತಿಭಟನೆನಡೆಸುತ್ತಿದ್ದಾರೆ. ಉದ್ಯೋಗ ಸಮಸ್ಯೆ ಹೆಚ್ಚಾಗಿದೆ. ಎಲ್ಲರಿಗೂ ಸರ್ಕಾರಿ ಕೆಲಸ ಸಿಗಲು ಸಾಧ್ಯವಿಲ್ಲ. ಖಾಸಗಿ ಉದ್ಯೋಗ ಮಾಡಲು ತಾವು ಸಿದ್ಧರಾಗಬೇಕೆಂದು ಹೇಳಿದರು.

ಉಪನ್ಯಾಸಕರಾದ ಕುಮಾರ್, ಆಶಾ, ಹರೀಶ್, ಸುನಂದಾ, ಮಹಾಲಕ್ಷ್ಮಿ, ದ್ರಾಕ್ಷಾಯಿಣಿ, ಸತೀಶ್, ಕುಮಾರ್, ಮನು ಇತರರಿದ್ದರು.

## ಅಭಿವೃದ್ಧಿ ಕಾಮಗಾರಿಗೆ ಶಾಸಕ ಚಾಲನೆ



• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ಹೂವಿನಹಳ್ಳಿ ಕಾವಲು ಗ್ರಾಮದಲ್ಲಿ 1 ಕೋಟಿ ರೂ. ವೆಚ್ಚದಲ್ಲಿ ಕೆಇಬಿ ಕಟ್ಟಡ ನಿರ್ಮಾಣ ಕಾಮಗಾರಿಗೆ ಶಾಸಕ ಹೆಚ್.ಪಿ. ಸ್ವರೂಪ್ ಅವರು ಗುರುವಾರ ಭೂಮಿಪೂಜೆ ನೆರವೇರಿಸಿದರು.

ಕುಪ್ಪಳ್ಳಿ ಗ್ರಾಮದಲ್ಲಿ ಕೆಆರ್‌ಐಡಿಎಲ್ ವತಿಯಿಂದ ಎಸ್‌ಸಿಎಸ್‌ಪಿ ಅನುದಾನದಡಿ 10 ಲಕ್ಷ ರೂ. ವೆಚ್ಚದ ಕಾಂಕ್ರೀಟ್ ರಸ್ತೆ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಗುಣಮಟ್ಟದ ಕಾಮಗಾರಿ ಕೈಗೊಂಡು ಆದಷ್ಟು ಬೇಗ ಕೆಲಸ ಮುಗಿಸಿ ಜನರ ಓಡಾಟಕ್ಕೆ ಅನುಕೂಲ ಕಲ್ಪಿಸಲು ಅಧಿಕಾರಿಗಳು ಮತ್ತು ಗುತ್ತಿಗೆದಾರರಿಗೆ ಸೂಚಿಸಲಾಗಿದೆ. ಗ್ರಾಮದ ಸಮಸ್ಯೆಗಳನ್ನು ನನ್ನ ಗಮನಕ್ಕೆ ತಂದಿದ್ದು ಮುಂದಿನ ದಿನಗಳಲ್ಲಿ ಅವುಗಳನ್ನು ಬಗೆಹರಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದೆಂದು ಭರವಸೆ ನೀಡಿದರು. ಸ್ಥಳೀಯ ಮುಖಂಡರು, ಕಾರ್ಯಕರ್ತರು, ಗ್ರಾಮಸ್ಥರು ಉಪಸ್ಥಿತರಿದ್ದರು.

## ಜೂನ್ 2ಕ್ಕೆ ಚಿತ್ರಕಲಾ ಸ್ಪರ್ಧೆ

• ಪ್ರಜೋದಯ ವರದಿ

**ಹಾಸನ:** ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಕಚೇರಿ ವತಿಯಿಂದ ಶಾಲಾ ಮಕ್ಕಳಿಗಾಗಿ ಜೂ.2 ರಂದು ಬೆಳಿಗ್ಗೆ 10 ಗಂಟೆಗೆ ನಗರದ ಮಹಾರಾಜ ಪಾರ್ಕ್ ನಲ್ಲಿ ಚಿತ್ರಕಲಾ ಸ್ಪರ್ಧೆ ಏರ್ಪಡಿ ಸಲಾಗಿದೆ.

ಕಿರಿಯ, ಹಿರಿಯ ಪ್ರಾಥಮಿಕ ಹಾಗು ಪ್ರೌಢಶಾಲಾ ಮಕ್ಕಳಿಗಾಗಿ ಪರಿಸರ ಕುರಿತು, ಪ್ರಕೃತಿಯಿಂದ ಪ್ರೇರಿತ ಹವಾಮಾನಕ್ಕಾಗಿ ನಮ್ಮ ಭವಿಷ್ಯಕ್ಕಾಗಿ ಎಂಬ ಘೋಷ ವಾಕ್ಯದ ಕುರಿತು ಸ್ಪರ್ಧೆ ಏರ್ಪಡಿಸಲಾಗಿದೆ. 1ರಿಂದ 5ನೇ ತರಗತಿ, 6 ರಿಂದ 8ನೇ ತರಗತಿ ಮತ್ತು 9 ಮತ್ತು 10ನೇ ತರಗತಿಯವರಿಗೆ ಮೂರು ವಿಭಾಗಗಳಲ್ಲಿ ಸ್ಥಳದಲ್ಲೇ ಚಿತ್ರ ಬರೆಯುವ ಸ್ಪರ್ಧೆ ನಡೆಯಲಿದೆ. ಡ್ರಾಯಿಂಗ್ ಶೀಟ್ ಅನ್ನು ಮಂಡಳಿಯಿಂದ ನೀಡಲಾಗುವುದು. ಚಿತ್ರಕಲೆಗೆ ಬೇಕಾಗುವ ಬಣ್ಣ ಇನ್ನಿತರೆ ವಸ್ತುಗಳನ್ನು ವಿದ್ಯಾರ್ಥಿಗಳೇ ತರಬೇಕು. ಆಸಕ್ತಿಯುಳ್ಳವರು ಸ್ಥಳದಲ್ಲಿಯೇ ತಮ್ಮ ಹೆಸರು ನೋಂದಾಯಿಸಿ ಕೊಳ್ಳಬಹುದು. ಹೆಚ್ಚಿನ ವಿವರಗಳಿಗಾಗಿ ಪರಿಸರ ಅಧಿಕಾರಿ ಭಾಸ್ಕರ್ (9972993021), ಕಚೇರಿಯ ದೂರವಾಣಿ ಸಂಖ್ಯೆ: 08172-241004ಗೆಹಾಗು ಸ್ಥಳೀಯ ಸಾರ್ವಜನಿಕ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳು (ಬಿಇಒ) ಸಂಪರ್ಕಿಸಬಹುದಾಗಿದೆ.

## ಸಕಲೇಶಪುರದಲ್ಲಿ ಅರಣ್ಯ ಇಲಾಖೆಯಿಂದ ದಬ್ಬಾಳಿಕೆ: ಆರೋಪ

• ಪ್ರಜೋದಯ ವರದಿ




**ಹಾಸನ:** ಸಕಲೇಶಪುರ ತಾಲ್ಲೂಕು ಕಿರುಹುಣಸೆ ಗ್ರಾಮದಲ್ಲಿ ವ್ಯಕ್ತಿಯೊಬ್ಬರಿಗೆ ಸೇರಿದ ಜಮೀನನ್ನು ಅರಣ್ಯ ಇಲಾಖೆ ತನ್ನ ಜಾಗವೆಂದು ಪ್ರತಿಪಾದಿಸಿ ದಬ್ಬಾಳಿಕೆ ನಡೆಸುತ್ತಿದೆ ಎಂದು ಮಲೆನಾಡು ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಸಾಗರ್ ಜಾನೆಕೆರೆ ಅವರು ಆರೋಪಿಸಿದರು.

ಸುದ್ದಿಗೋಷ್ಟಿಯಲ್ಲಿ ಗುರುವಾರ ಮಾತನಾಡಿದ ಅವರು, ಗ್ರಾಮದ ಸರ್ವೆ ನಂ.72/1ರಲ್ಲಿ 4 ಎಕರೆ 38 ಗುಂಟೆ ಜಾಗವನ್ನು ಬಿ.ಎನ್.ದಿನೇಶ್ ಅವರು 2025ರ ಜುಲೈ 27ರಂದು ಕ್ರಯ ಪತ್ರದ ಮೂಲಕ ಖರೀದಿಸಿದ್ದಾರೆ. ಕಾಫಿ ಬೆಳೆ ಮಾಡಿಕೊಂಡಿದ್ದು ಆಗಾಗ ದಿನೇಶ್ ಅವರು ತೋಟಕ್ಕೆ ಭೇಟಿ ನೀಡುತ್ತಾರೆ. ಆದರೆ ಜಾಗದಲ್ಲಿ ಅಕೇಶಿಯಾ ಸೇರಿ ಇತರೆ ಕಾಡು ಮರಗಳು ಬೆಳೆದಿವೆಯೆಂಬ ಕಾರಣಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಆ ಜಾಗ ಅರಣ್ಯ ಇಲಾಖೆಗೆ ಸೇರಿದೆ ಎಂದು ದಬ್ಬಾಳಿಕೆ ಮಾಡುತ್ತಿದ್ದಾರೆಂದು ಆರೋಪಿಸಿದರು.

1978ರಲ್ಲಿ ದರಖಾಸ್ತು ಮೂಲಕ ಮಂಜೂರಾದ ಭೂಮಿ ಅದಾಗಿದೆ. 1982ರಲ್ಲಿ ಫಲಾನು ಭವಿಗಳಿಗೆ ಸಾಗುವಳಿ ಚೀಟಿ ನೀಡಲಾಗಿದೆ. ಕಳೆದ 44 ವರ್ಷಗಳಿಂದ ಅನುಭವದಲ್ಲಿ ರೈತರಿದ್ದಾರೆ. ಆದರೆ ಕಳೆದ ಎರಡು ತಿಂಗಳಲ್ಲಿ ಏಕಾಏಕಿ ಅರಣ್ಯ ಇಲಾಖೆ ದಾಂಗುಡಿ ಇಟ್ಟಿದ್ದು ಏಕೆ ಎಂದು ಪ್ರಶ್ನಿಸಿದರು.

ತಾಲ್ಲೂಕಿನಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳ ಉಪಟಳ ಮಿತಿ ಮೀರಿದೆ. ಕಾಡಾನೆಗಳ ಚಲನವಲನ ಅರಿಯಲು ಹಾಗು ಓಡಿಸಲು ನಿಯೋಜನೆಗೊಂಡಿರುವ ಇಟಿಎಫ್ ಸಿಬ್ಬಂದಿ ಯನ್ನು ಅನ್ಯ ಕೆಲಸಕ್ಕೆ ಬಳಸಿಕೊಳ್ಳುತ್ತಾರೆ. ಅಧಿಕಾರಿಗಳ ಮನೆ ಕೆಲಸ, ಕಾರು ಓಡಿಸುವುದು ಸಿಬ್ಬಂದಿ ಕೆಲಸವಾಗಿದೆ. ದಿನೇಶ್ ಅವರ ಜಮೀನಿಗೆ ಬೇಲಿ ಹಾಕಲು ಇಟಿಎಫ್ ಹುಡುಗರನ್ನು ಬಳಸಿಕೊಂಡಿದ್ದಾರೆ. ಇಷ್ಟು ಮಾತ್ರವಲ್ಲದೆ ದಿನೇಶ್ ಪರವಾಗಿ ನಾವು ಮಾತನಾಡಿದ್ದಕ್ಕೆ ಹಲ್ಲೆಗೆ ಮುಂದಾಗಿದ್ದಾರೆಂದು ಆರೋಪಿಸಿದರು.

ಸಕಲೇಶಪುರದಲ್ಲಿ ಅಧಿಕಾರಿಗಳಿಗೆ ಹೇಳುವವರು ಕೇಳುವವರು ಯಾರೂ ಇಲ್ಲವಾಗಿದ್ದಾರೆ.

ದಿನೇಶ್ ಅವರಿಗೆ ಸೇರಿದ ಜಮೀನು ಸೆಕ್ಷನ್ 4ರ ಅಡಿ ಅರಣ್ಯ ಇಲಾಖೆಗೆ ಸೇರಿದ್ದರೆ ದಾಖಲಾತಿಗಳನ್ನು ಸಲ್ಲಿಸಬೇಕು. ಆದರೆ ಅಧಿಕಾರಿಗಳು ನಮ್ಮ ಮೇಲೆ ದರ್ಪ ಮೆರೆದಿದ್ದಾರೆ. ಸಕಲೇಶಪುರ ತಹಶೀಲ್ದಾರ್ ಸಹ ಕಾನೂನು ಗಾಳಿಗೆ ತೂರಿ ಕೆಲಸ ಮಾಡುತ್ತಿದ್ದಾರೆ. ಜಿಲ್ಲಾಧಿಕಾರಿ ಅವರು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಅರಣ್ಯ ಇಲಾಖೆಯ ನೌಕರರು ಹಾಗು ತಹಶೀಲ್ದಾರ್ ವಿರುದ್ಧ ಕ್ರಮ ಜರುಗಿಸಬೇಕೆಂದು ಆಗ್ರಹಿಸಿದರು.

ಗ್ರಾಮದ ದಿನೇಶ್, ದರ್ಶನ್, ಅಣ್ಣಪ್ಪ ಪೂಜಾರಿ ಹಾಜರಿದ್ದರು.

### ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ.ಸಿ.ಸೋಮಶೇಖರ್ ಸಲಹೆ

## ವಿದ್ಯಾರ್ಥಿ ದೆಸೆಯಲ್ಲಿಯೇ ಸ್ಪಷ್ಟ ಗುರಿ ಹೊಂದಿ

• ಪ್ರಜೋದಯ ವರದಿ



**ಹಾಸನ:** ವಿದ್ಯಾರ್ಥಿಗಳು ಕಠಿಣ ಪರಿಶ್ರಮ, ಸಂಯಮ ಹಾಗು ಶ್ರದ್ಧಾಭಕ್ತಿಯಿಂದ ಗುರಿಯನ್ನಿಟ್ಟುಕೊಂಡು ಅಧ್ಯಯನ ಮಾಡಿದರೆ ಜೀವನದಲ್ಲಿ ಸಾಧನೆ ಮಾಡಬಹುದೆಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ.ಸಿ.ಸೋಮಶೇಖರ್ ಅವರು ತಿಳಿಸಿದರು.

ನಗರದ ಎವಿಕೆ ಮಹಿಳಾ ಕಾಲೇಜಿನಲ್ಲಿ ಆಯೋಜಿಸಿದ್ದ ಕ್ರೀಡಾ ಹಾಗು ಕಾಲೇಜು ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿ ದಿಸೆಯಲ್ಲಿಯೇ ಸ್ಪಷ್ಟ ಗುರಿ ಹೊಂದಿ ಗುರುಗಳ ಮಾರ್ಗದರ್ಶನದಲ್ಲಿ ಶ್ರದ್ಧೆಯಿಂದ ಅಭ್ಯಾಸ ಮಾಡಿದರೆ ಯಶಸ್ಸು ಸುಲಭವಾಗಿ ದೊರೆಯು ತ್ತದೆ. ಆ ನಿಟ್ಟಿನಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯೂ ತಮ್ಮ ಶ್ರಮವನ್ನು ಸಮರ್ಪಕವಾಗಿ ಹೂಡ ಬೇಕೆಂದರು.

ಹಾಸನ ಜಿಲ್ಲೆಯ ಹೆಮ್ಮೆಯ ಶಿಕ್ಷಣ ಸಂಸ್ಥೆಗಳಲ್ಲೊಂದಾಗಿರುವ ಎವಿಕೆ ಮಹಿಳಾ ಕಾಲೇಜು ಇತಿಹಾಸ ಪ್ರಸಿದ್ಧ ಸಂಸ್ಥೆಯಾಗಿದೆ. ಮೈಸೂರಿನ ಮಹಾರಾಣಿ ಕಾಲೇಜಿನ ಮಾದರಿಯಲ್ಲಿ ಈ ಕಾಲೇಜು ಕೂಡ ಶಿಕ್ಷಣ ಕ್ಷೇತ್ರದಲ್ಲಿ ವಿಶಿಷ್ಟ ಸ್ಥಾನ ಪಡೆದಿದ್ದು, ಇಲ್ಲಿ ವ್ಯಾಸಂಗ ಮಾಡಿದ ಅನೇಕ ವಿದ್ಯಾರ್ಥಿನಿಯರು ರಾಜ್ಯದ ವಿವಿಧ ಭಾಗಗಳಲ್ಲಿ ಉತ್ತಮ ಜೀವನ ರೂಪಿಸಿಕೊಂಡಿದ್ದಾರೆ ಎಂದು ಹೇಳಿದರು.

ಹಾರನಹಳ್ಳಿ ರಾಮಸ್ವಾಮಿ ಅವರ ದೂರದೃಷ್ಟಿ ಮತ್ತು ಮಹಿಳಾ ಶಿಕ್ಷಣದ ಸಂಕಲ್ಪದಿಂದ ಈ ಕಾಲೇಜು ಸ್ಥಾಪನೆಯಾಯಿತು. ಅಂದಿನಿಂದ ಇಂದಿನವರೆಗೂ ಸಂಸ್ಥೆ ಶೈಕ್ಷಣಿಕವಾಗಿ ಉತ್ತಮ ಹೆಸರು ಗಳಿಸಿಕೊಂಡಿದ್ದು, ಸಾವಿರಾರು ವಿದ್ಯಾರ್ಥಿನಿಯರ ಭವಿಷ್ಯ ನಿರ್ಮಾಣದಲ್ಲಿ ಮಹತ್ವದ ಪಾತ್ರವಹಿಸಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಬಿ.ಆರ್. ಗುರುದೇವ್ ಅವರು ಮಾತನಾಡಿ, ಎವಿಕೆ ಮಹಿಳಾ ಕಾಲೇಜು ವರ್ಷದಿಂದ ವರ್ಷಕ್ಕೆ ಶೈಕ್ಷಣಿಕ ಪ್ರಗತಿ ಸಾಧಿಸುತ್ತಿದ್ದು, ಮಲೆನಾಡು ಭಾಗದ ಅನೇಕ ವಿದ್ಯಾರ್ಥಿನಿಯರು ಇಲ್ಲಿ ವಿದ್ಯಾಭ್ಯಾಸ ಮಾಡಿ ತಮ್ಮ ಭವಿಷ್ಯ ರೂಪಿಸಿ ಕೊಳ್ಳುತ್ತಿದ್ದಾರೆಂದು ಹೇಳಿದರು.

ಕಾರ್ಯಕ್ರಮದಲ್ಲಿ ಕ್ರೀಡೆ, ಸಾಂಸ್ಕೃತಿಕ ಹಾಗು ಶೈಕ್ಷಣಿಕ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವಿದ್ಯಾರ್ಥಿನಿಯರನ್ನು ಡಾ.ಸಿ.ಸೋಮಶೇಖರ್ ಅವರು ಸನ್ಮಾನಿಸಿ ಗೌರವಿಸಿದರು. ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಜಿ.ಟಿ. ಕುಮಾರ್, ಜಂಟಿ ಕಾರ್ಯದರ್ಶಿ ಜಿ. ಆರ್.ಶ್ರೀನಿವಾಸ್, ಪ್ರಾಂಶುಪಾಲ ಡಾ.ಸಿ.ಹೆಚ್.ಯತೀಶ್ವರ್, ಪತ್ರಕರ್ತ ರವಿನಾಕಲಗೂಡು ಇತರರು ಇದ್ದರು.

## ಎಬೋಲಾ: ಭಾರತದಿಂದ ಮಾರ್ಗಸೂಚಿ ಬಿಡುಗಡೆ

**ನವದೆಹಲಿ:** ಎಬೋಲಾ ಪೀಡಿತ ರಾಷ್ಟ್ರಗಳ ಮೂಲಕ ಸಂಚರಿಸುವ ಮತ್ತು ಅಲ್ಲಿಂದ ಬರುವ ಪ್ರಯಾಣಿಕರಿಗೆ ಭಾರತ ಆರೋಗ್ಯ ಮಾರ್ಗಸೂಚಿ ಬಿಡುಗಡೆ ಮಾಡಿದೆ.

ಸೋಂಕಿನ ಲಕ್ಷಣ ಹೊಂದಿರುವವರು ಪ್ರಯಾಣಕ್ಕೆ ಅನುಮತಿ ಪಡೆಯುವ ಮೊದಲು ವಿಮಾನ ನಿಲ್ದಾಣದ ಆರೋಗ್ಯ ಅಧಿಕಾರಿಗಳಿಗೆ ಮಾಹಿತಿ ನೀಡಬೇಕೆಂದು ಆರೋಗ್ಯ ಸೇವೆಗಳ ಮಹಾನಿರ್ದೇಶನಾಲಯ ತನ್ನ ಮಾರ್ಗಸೂಚಿಯಲ್ಲಿ ತಿಳಿಸಿದೆ. ಕಾಂಗೊ, ಸುಡಾನ್ ಮತ್ತು ಉಗಾಂಡದಿಂದ ಬರುವವರು ಹೆಚ್ಚಿನ ಮುಂಜಾಗ್ರತೆ ವಹಿಸುವಂತೆ ಸೂಚಿಸಲಾಗಿದೆ. ಜ್ವರ, ಅಸ್ವಸ್ಥತೆ, ತಲೆ ನೋವು, ಮಾಂಸಖಂಡಗಳಲ್ಲಿ ನೋವು, ವಾಂತಿ,ಭೇದಿ, ಗಂಟಲು ನೋವು ಮತ್ತು ರಕ್ತಸ್ರಾವದಂಥ ಲಕ್ಷಣ ಕಂಡುಬಂದರೆ ಎಚ್ಚರ ವಹಿಸುವಂತೆ ಸಲಹೆ ನೀಡಲಾಗಿದೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK